## ೫. ಷಟ್ಖಂಡಾಗಮ ಮತ್ತು ಕಷಾಯ ಪ್ರಾಭೃತಗಳ ವ್ಯಾಖ್ಯಾನಗಳು ಮತ್ತು ವ್ಯಾಖ್ಯಾನಕಾರರು_(ಬಪ್ಪದೇವಗುರುಪರ್ಯಂತ)

ಕರ್ಮಪ್ರಾಭೃತ(ಷಟ್ಖಂಡಾಗಮ)ದ ಪ್ರಪ್ರಥಮ ವ್ಯಾಖ್ಯಾನಕಾರರು ಆಚಾರ್ಯ ಪದ್ಮನಂದಿ–ಕುಂದ ಕುಂದ ಸ್ವಾಮಿಯವರು. ಇಂದ್ರನಂದಿಯವರ ಶ್ರುತಾವತಾರದಲ್ಲಿ ಹೇಳಿರುವಂತೆ,_'ಈ ರೀತಿಯಾಗಿ ದ್ವಿವಿಧ (ಷಟ್‌ಖಂಡಾಗಮ ಮತ್ತು ಕಷಾಯಪಾಹುಡ) ಸಿದ್ಧಾಂತವು ದ್ರವ್ಯ ಭಾವ ರೂಪದಿಂದ ಪುಸ್ತಕಗತವಾಗಿ ಗುರುಪಾಟಿಯಿಂದ ಬಂದು ಕುಂದಪುರದಲ್ಲಿ ಪದ್ಮನಂದಿ ಮುನಿಯಿಂದ ಜ್ಞಾತವಾಯಿತು (ಪದ್ಮ ನಂದಿ ಮುನಿಯು ತಿಳಿದನು). ಅವನಾದರೋ ಷಟ್ಖಂಡಾಗಮದ ಮೊದಲ ಮೂರುಖಂಡಕ್ಕೆ ಹನ್ನೆರಡು ಸಾವಿರ (ಗ್ರಂಥ) ಪರಿಮಾಣದ ಪರಿಕರ್ಮ (ಟೀಕಾ) ಗ್ರಂಥದ ಕರ್ತೃವಾಗಿರುವನು'[೧] (ಶ್ಲೋ. ಸಂ. ೧೬೦– ೧೬೧) ಇಂದ್ರನಂದಿಸ್ವಾಮಿಯವರ ಈ ಹೇಳಿಕೆಯಂತೆ ಕುಂದಪುರದಲ್ಲಿ ಪದ್ಮನಂದಿ ಸ್ವಾಮಿಯವರು ಷಟ್ ಖಂಡಾಗಮದ ಮೊದಲ ಮೂರು ಖಂಡಗಳಿಗೆ ಹನ್ನೆರಡು ಸಾವಿರ ಶ್ಲೋಕ ಪ್ರಮಾಣದ 'ಪರಿಕರ್ಮ' ಎಂಬ ವ್ಯಾಖ್ಯಾನ ಅಥವಾ ಟೀಕೆಯನ್ನು ರಚಿಸಿದ್ದಾರೆ. ಈ ಪರಿಕರ್ಮ ಟೀಕೆಯು, ಷಟ್‌ಖಂಡಾಗಮಕ್ಕೆ ಕೊನೆಯದಾಗಿ ಧವಲಾ ಟೀಕೆಯನ್ನು ರಚಿಸಿದ, ವೀರಸೇನಸ್ವಾಮಿಯವರ ಸಂಮುಖದಲ್ಲಿದ್ದಿತೆಂದು ಧವಲಾಟೀಕೆಯಲ್ಲಿ ಕಂಡು ಬರುವ ಉಲ್ಲೇಖಗಳಿಂದ ತಿಳಿದು ಬರುವುದು: ಈಟೀಕೆ ಮತ್ತು ಟೀಕಾಕಾರರಾದ ಕುಂದ ಕುಂದರ ಬಗ್ಗೆ ಷಟ್ಖಂಡಾಗಮದ (ಖಂಡ ೧ಪುಸ್ತಕ ೧,ಭಾಗ ೧ರಲ್ಲಿರುವ) ಮುನ್ನುಡಿಯಲ್ಲಿ ಪ್ರಸ್ತುತವಾಗಿರುವುದನ್ನು ತಿಳಿದುಕೊಳ್ಳಬೇಕಾಗಿದೆ.[೨]

"ಕರ್ಮಪ್ರಾಭೃತ (ಷಟ್ ಖಂಡಾಗಮ) ಮತ್ತು ಕಷಾಯ ಪ್ರಾಭೃತ_ ಈ ಎರಡು ಸಿದ್ಧಾಂತಗಳ ಜ್ಞಾನವು ಗುರುಪರಿಪಾಟಿಯಿಂದ ಕುಂದಕುಂದಪುರದ ಮುನಿ ಪದ್ಮ ನಂದಿಯವರಿಗೆ ಪ್ರಾಪ್ತವಾಯಿತು. ಅವರು ಎಲ್ಲರಿಗಿಂತ ಮುಂಚಿತರಾಗಿ[೩] ಷಟ್ ಖಂಡಾಗಮದ ಮೊದಲ ಮೂರು ಖಂಡಗಳಿಗೆ ಹನ್ನೆರಡು ಸಾವಿರ ಶ್ಲೋಕ ಪ್ರಮಾಣದ ಪರಿಕರ್ಮ ಎಂಬ ಹೆಸರಿನ ಟೀಕಾಗ್ರಂಥವನ್ನು ರಚಿಸಿದರು[೧].

ಇಲ್ಲಿ ಇಂದ್ರನಂದಿಯವರು ಹೇಳಿರುವ 'ಕುಂದಕುಂದಪುರದ ಪದ್ಮನಂದಿ' ಎಂಬ ಉಕ್ತಿ ಯಿಂದ ದಿಗಂಬರ ಜೈನ ಸಂಪ್ರದಾಯದಲ್ಲಿ ಮಾರ್ಧನ್ಯ ಮಹಾನ್ ಆಚಾರ್ಯ ರೆಂಬುದಾಗಿ ಗಣನೆ ಹೊಂದಿರುವವರಾದ' ಜೈನ ಸಿದ್ಧಾಂತದಲ್ಲಿ ಎಲ್ಲಕ್ಕೂ ಮಿಗಿಲಾದ ಪ್ರಾಮಾಣ್ಯವೆಂದು ಸಂಮಾನಿತವಾಗಿರುವ ಪ್ರವಚನಸಾರ, ಸಮಯಸಾರ ಮುಂತಾದ ಗ್ರಂಥಗಳ ಕರ್ತೃಗಳಾದ, ನಮ್ಮ ಆ ಪ್ರಾತಃಸ್ಮರಣೀಯ ಕುಂದಕುಂದ ಆಚಾರ್ಯರೇ ಸೂಚಿತರಾಗಿರುವರೆಂದು ಮೇಲೆ ಕಾಣಿಸಿದ್ದೇವೆ. ದೌರ್ಭಾಗ್ಯದಿಂದ ಅವರು ರಚಿಸಿರುವ ಈ (ಪರಿಕರ್ಮ) ಟೀಕೆಯು (ಸ್ವತಂತ್ರವಾಗಿ) ಈಗ ಲಭ್ಯವಿಲ್ಲ, ಅಲ್ಲದೆ ಬೇರೆ ಯಾವ (ಗ್ರಂಥ) ಲೇಖಕರೂ ಇದರ ಉಲ್ಲೇಖ ಮಾಡಿಲ್ಲ. ಆದರೆ ಸ್ವಯಂ ಧವಲಾ ಟೀಕೆ ಯಲ್ಲಿ 'ಪರಿಕರ್ಮ' ಎಂಬ ಗ್ರಂಥದ ಬಗ್ಗೆ 'ಪರಿಕರ್ಮದಲ್ಲಿ ಹೀಗೆ ಹೇಳಿದೆ– ತ್ರಿಪರಿಯಮ್ಮೇ ವುತ್ತಂ' ಎಂದು ಮುಂತಾದ ಉಲ್ಲೇಖಗಳು ಅನೇಕ ಬಾರಿ ಬಂದಿವೆ.[೪] ಒಂದೆಡೆಯಲ್ಲಿ ವೀರಸೇನಾಚಾರ್ಯರು ಪರಿಕ್ರಮದ ಕಥನದ ವಿರುದ್ಧ ತಮ್ಮ ಕಥನದ ಪುಷ್ಟಿ ಮಾಡಿ ಈ ತಮ್ಮ ಕಥನವನ್ನೇ ಪ್ರಮಾಣವಾದುದನ್ನಾಗಿ ಗ್ರಹಿಸಬೇಕೆಂದೂ ಪರಿಕರ್ಮದ ವ್ಯಾಖ್ಯಾನವು ಸೂತ್ರ ವಿರೋಧವಾಗಿರುವುದರಿಂದ ಅದನ್ನು ಗ್ರಹಣ ಮಾಡಬಾರದೆಂದೂ ಹೇಳಿದ್ದಾರೆ. ಇದರಿಂದ ಪರಿಕ್ರಮವು ಇದೇ ಷಟ್ಖಂಡಾಗಮದ ಟೀಕೆಯಾಗಿದ್ದಿತೆಂದು ನಿಚ್ಚಳವಾಗಿ ಸ್ಪಷ್ಟವಾಗುವುದು.

ಪರಿಕ್ರಮದ ಉಲ್ಲೇಖಗಳೆಲ್ಲವೂ ಪ್ರಾಯಿಕವಾಗಿ ಷಟ್ಖಂಡಾಗಮದ ಮೊದಲ ಮೂರು ಖಂಡಗಳ ವಿಷಯಗಳೊಡನೆ ಸಂಬಂಧ ಹೊಂದಿದೆ. ಇದರಿಂದ ಪರಿ ಕರ್ಮವು ಮೊದಲ ಮೂರು ಖಂಡಗಳ ಟೀಕೆಯಾಗಿದ್ದಿತೆಂಬ ಇಂದ್ರನಂದಿಯವರ ಹೇಳಿಕೆಯ ಸತ್ಯನಿಷ್ಠೆ ವ್ಯಕ್ತವಾಗುವುದು. ಧವಲಾಟೀಕೆಯಲ್ಲಿ ಉಲ್ಲೇಖಗೊಂಡಿರುವಪರಿಕರ್ಮ ಸಂಬಂಧಿ ಹೇಳಿಕೆಗಳಿಂದ ಇದರ ಕರ್ತೃವಿನ ಹೆಸರು ಮುಂತಾದ ಸಂಗತಿಗಳ ಸೂಚನೆ ದೊರೆಯುವುದಿಲ್ಲ, ಅಲ್ಲದೆ ಅವುಗಳಲ್ಲಿ ಪರಿಕ್ರಮವು ಕುಂದಕುಂದ ಸ್ವಾಮಿಯವರ ರಚನೆಯಾಗಿಲ್ಲ ಎಂಬುದರ ಸೂಚನೆಯೂ ದೊರೆಯುವುದಿಲ್ಲ. ಧವಲಾ ರಚನಕಾರ ವೀರಸೇನ ಸ್ವಾಮಿಯವರು ಕುಂದಕುಂದ ಸ್ವಾಮಿಯರ ಇತರ ಸುವಿಖ್ಯಾತ ಕೃತಿಗಳಿಂದ ಕರ್ತೃವಿನ ಹೆಸರನ್ನು ಹೇಳದೆಯೇ, ಉಲ್ಲೇಖಮಾಡಿದ್ದಾರೆ. ಉದಾಹರಣೆಯಾಗಿ 'ವುತ್ತಂ ಚ ಪಂಚತ್ಥಿ ಪಾಹುಡೇ' (ಧವಲಾ ಅ. ಪು. ೨೪೯)

ಇಂದ್ರನಂದಿಯವರು ಈ ಪರಿಕರ್ಮ ಟೀಕೆಯನ್ನು ಎಲ್ಲಕ್ಕೂ ಮೊದಲಿನದು ಎಂದು ಹೇಳಿದ್ದಾರೆ ಮತ್ತು ಧವಲಾ ಟೀಕಾಕಾರರು ಅದನ್ನು ಸರ್ವ ಆಚಾರ್ಯ ಸಮ್ಮತವಾದುವೆಂದು ಹೇಳಿದ್ದಾರೆ, ಹಾಗೂ ಅದನ್ನು ಅಲ್ಲಲ್ಲಿ ಉಲ್ಲೇಖಿಸಿದ್ದಾರೆ. ಇದರಿಂದ ಅದು ಕುಂದಕುಂದಾಚಾರ್ಯಕೃತವೆಂದು ಮಾನ್ಯ ಮಾಡಲು ಯಾವ ಆಪತ್ತಿಯೂ ಇಲ್ಲ. ಇಂದ್ರನಂದಿಯವರು ಈ ಪರಿಕರ್ಮ ಟೀಕೆಯು ಯಾವ ಭಾಷೆ ಯದು ಎಂಬುದನ್ನು ಹೇಳಿಲ್ಲವಾದರೂ, ಧವಲಾದಲ್ಲಿ ಬಂದಿರುವ ಅದರ (ಎಲ್ಲ) ಅವತರಣಗಳು ಪ್ರಾಕೃತ ಭಾಷೆಯಲ್ಲಿಯೇ ಇರುವುವಾದ್ದರಿಂದ ಅದು ಪ್ರಾಕೃತ ದಲ್ಲಿಯೇ ಬರೆಯಲ್ಪಟ್ಟಿರಬೇಕೆಂದು ತಿಳಿಯಬಹುದಾಗಿದೆ. [ಈ ಪರಿಕ್ರಮವು ಪ್ರಾಕೃತ ಭಾಷೆಯಲ್ಲಿ ರಚಿತವಾಗಿದೆಯೆಂಬುದಕ್ಕೆ ಬೇರೊಂದೊಡೆಯಿಂದ ಸಾಕ್ಷಿ ದೊರೆಯುತ್ತದೆ: 'ರಾಜಾವಳೀ ಕಥಾ' ರಚನಕಾರ ದೇವಚಂದ್ರನು ತನ್ನ ಪೂಜ್ಯಪಾದಚರಿತೆಯಲ್ಲಿ 'ಪದ್ಮನಂದ್ಯಾರ್ಯನು ಪೇಳಿದ ಪ್ರಾಕೃತದಿಂದಾ' ಎಂದು ಹೇಳಿದ್ದಾನೆ. ಇದರಿಂದ 'ಪರಿಕರ್ಮ'ವು ಪ್ರಾಕೃತದಲ್ಲಿ ರಚಿತವಾಗಿದ್ದಿತೆಂದು ಸಮರ್ಥಿತ ವಾಗುವುದು.[೫] ]ಕುಂದಕುಂದರ ಇತರ ಎಲ್ಲ ಗ್ರಂಥಗಳೂ ಪ್ರಾಕೃತ ಭಾಷೆಯವೇ ಆಗಿವೆಯೆಂಬುದು ಇಲ್ಲಿಗಮನಾರ್ಹ ಅಂಶವಾಗಿದೆ.

ಧವಲಾದಲ್ಲಿ ಪರಿಕರ್ಮದ ಒಂದು ಉಲ್ಲೇಖ ಮುಂದಿನಂತಿದೆ[೬]. 'ಅಪದೇಸಂ ಣೇವ ಇಂದಿಏ ಗೆಜ್ಝಂ' ಇದಿ ಪರಮಾಣೂಣಂ ಣಿರವಯವತ್ತಂ ವುತ್ತಮಿದಿ (ಧ. ೧೧೧೦). ಇದನ್ನು ಕುಂದಕುಂದರ ನಿಯಮಸಾರದ ಈ ಮುಂದಿನ ಗಾಹೆಯೊಡನೆ ಹೋಲಿಸಿ ನೋಡಬೇಕು :

ಅತ್ತಾದಿ ಅತ್ತಮಜ್ಝಂ ಅತ್ತತ್ತಂ ಣೇವ ಇಂದಿಏ ಗೆಜ್ಝಂ ।<br>
ಅವಿಭಾಗೀ ಜಂದವ್ವಂ ಪರಮಾಣೂ ತಂ ವಿಯಾಣಾಹಿ ॥೨೬॥

ಈ ಗಾಹೆ ಮತ್ತು ಪರಿಕರ್ಮದ ಈ ಹಿಂದಿನ ಅವತರಣಿಕೆಗಳನ್ನು ಹೋಲಿಸಿ ನೋಡಿ ದಲ್ಲಿ ಅವತರಣಿಕೆಯು ನಿಯಮಸಾರದ ಗಾಹೆಯದಾಗಿರದೆ ಬೇರೆಯದೇ ಆಗಿದೆ ಯೆಂಬುದು ಸ್ಪಷ್ಟವಾಗಿ ಗೋಚರಿಸುವುದು. ಆದರೆ ಇವೆರಡರ ರಚನೆಗಳಲ್ಲಿ ಒಬ್ಬರದೇ ಆದ ಕರ್ತೃತ್ವವು ಸುಸ್ಪಷ್ಟ ರೀತಿಯಿಂದ

ಕಂಡುಬರುವುದು. ಈ ಎಲ್ಲ ಪ್ರಮಾಣಗಳಿಂದ ಕುಂದಕುಂದರ ರಚನೆಯಾದ ಪರಿಕರ್ಮವಿದ್ದಿತೆಂಬುದರಲ್ಲಿ ಸಂದೇಹ ಅತ್ಯಲ್ಪದ್ದಾಗುವುದು.

ಧವಲಾಕಾರರು ಒಂದೆಡೆ 'ಪರಿಕರ್ಮ'ವನ್ನು 'ಸುತ್ತ' (ಸೂತ್ರ) ಎಂದು ಮುಂದಿನಂತೆ ಉಲ್ಲೇಖಿಸಿದ್ದಾರೆ : 'ರೂವಾಹಿಯಾಣೆತ್ತಿ ಪರಿಯಮ್ಮ ಸುತ್ತೇಣ ಸಹ ವಿರುಜ್ಝ ಇ' (ಧ. ಅ. ಪು. ೧೪೩). ಬಹುತರ ವೃತ್ತಿರೂಪದ ವ್ಯಾಖ್ಯಾನಗಳನ್ನು ಸೂತ್ರ ಎಂದು ಕರೆಯುವುದೂ ಉಂಟು. ಜಯಧವಲಾದಲ್ಲಿ ಯತಿ ವೃಷಭರನ್ನು ಕಷಾಯ ಪ್ರಾಭೃತದ ವೃತ್ತಿ ಕರ್ತೃ ಎಂದು ಮುಂದಿನಂತೆ ನಿರ್ದೇಶಿಸಿದೆ. 'ಸೋ ವಿತ್ತಿಸುತ್ತ ಕತ್ತಾ ಜಇವ ಸಹೋ ಸೇ ವರಂ ದೇಊ' (ಜಯಧವಲಾ ಮಂಗಲಾಚರಣ ಗಾಹಾ). ಇದರಿಂದ ಪರಿಕರ್ಮವು ವೃತ್ತಿರೂಪದ ವ್ಯಾಖ್ಯಾನವಾಗಿದ್ದಿರಬೇಕೆಂದು ತಿಳಿಯಬಹುದು.ವೈಜಯಂತೀ ಕೋಶದನುಸಾರ 'ಗ್ರಂಥ' ಎಂಬುದು ವೃತ್ತಿ ಎಂಬುದರ ಪರ್ಯಾಯವಾಚಕವಾದ ಹೆಸರು–'ವೃತ್ತಿರ್ಗ್ರಂಥ ಜೀವನಯೋಃ ಜಯಧವಲಾದಲ್ಲಿ (ಅ. ೫೨) 'ಸುತ್ತಸ್ಸೇವ ವಿವರಣಾಏ ಸಂಖಿತ್ತ ಸದ್ದರಯಣಾಏ ಸಂಗಹಿಯ ಸುತ್ತಾ ಸೇ ಸತ್ಥಾಏ ವಿತ್ತಿಸುತ್ತವವಏಸಾದೋ' ಸಂಕ್ಷೇಪ ರೂಪದ ಶಬ್ದ ರಚನೆಯೊಡನೆ ಸೂತ್ರದ ಸಮಸ್ತ ಅರ್ಥವನ್ನು ಸಂಗ್ರಹಿಸಿ ಸೂತ್ರದ್ದೇ ಆದ ವಿವರಣೆ ಕೊಡುವಂತಹುದಕ್ಕೆ 'ವೃತ್ತಿಸೂತ್ರ' ಎಂದು ಹೇಳಲಾಗಿದೆ. ಎಂಬುದಾಗಿ ವೃತ್ತಿಯ ಲಕ್ಷಣವನ್ನು ಹೇಳಿದೆ."[೧೧]

ಮೇಲೆ ಹೇಳಿರುವಂತೆ, ಷಟ್ಖಂಡಾಗಮದ ಮೊದಲ ಮೂರು ಖಂಡಗಳಿಗೆ ಪರಿ ಕರ್ಮವೆಂಬ ವೃತ್ತಿ ಟೀಕೆ ಇದ್ದಿತೆಂಬುದು ಖಚಿತವಾಗಿದ್ದು ಆ ವೃತ್ತಿ ಟೀಕೆಯು ಕುಂದಕುಂದ ಸ್ವಾಮಿಯವರ ರಚನೆಯಾಗಿದೆ ಎಂಬುದರ ಬಗ್ಗೆ ಸಂದೇಹವು ಅತ್ಯಲ್ಪ ಮಾತ್ರದ್ದಾಗಿರುವುದೆಂಬ ಷಟ್ಖಂಡಾಗಮ ಸತ್ಪ್ರರೂಪಣಾ(೧)ದ ಮುನ್ನುಡಿಕಾರರ ಅಭಿಮತವನ್ನು ತಿಳಿದಂತಾಗಿದೆ. ಆದರೆ ಅನ್ಯ ಪ್ರಸಿದ್ಧ ವಿದ್ವಾಂಸರ ಅಭಿಪ್ರಾಯಗಳನ್ನುಗಮನಿಸುವಲ್ಲಿ ಈ ಬಗ್ಗೆ ಇನ್ನೂ ಒಂದೆರಡು ಪ್ರಶ್ನೆಗಳು ಎದುರಿಗೆ ನಿಲ್ಲುತ್ತವೆ.ಮೊದಲನೆಯದಾಗಿ ಶ್ರುತಾವತಾರದ ಹೇಳಿಕೆಯನ್ನಾಧರಿಸಿ ಮೂಡಿರುವ ಪ್ರಶ್ನೆಯನ್ನು ಪರಿಶೀಲಿಸಬೇಕಾಗಿದೆ.

ಶ್ರುತಾವತಾರದ ರಚನಕಾರ ಇಂದ್ರನಂದಿ ಸ್ವಾಮಿಯವರು ಮೊದಲಿಗೆ ಪುಷ್ಪದಂತ ಮತ್ತು ಭೂತಬಲಿ ಸ್ವಾಮಿಗಳವರಿಂದ ಪ್ರಥಮ ಆಗಮವೆನಿಸಿರುವ ಷಟ್ಖಂಡಾಗಮವು ರಚನೆಯಾದ ಇತಿವೃತ್ತವನ್ನು ಹೇಳಿ ಅದರ ಬಳಿಕ ದ್ವಿತೀಯ ಆಗಮವೆನಿಸಿರುವ ಕಷಾಯ ಪ್ರಾಭೃತವು ಗುಣಧರ ಸ್ವಾಮಿಯವರಿಂದ ರಚನೆಯಾದ ಸಂಗತಿ, ಅದನ್ನುಅವರು ನಾಗಹಸ್ತಿ ಮತ್ತು ಆರ್ಯಮಂಕ್ಷು ಸ್ವಾಮಿಗಳಿಗೆ ಬೋಧಿಸಿದ ಸಂಗತಿ,ಇವರಿಂದ ಇದರ ಬೋಧನೆ ಪಡೆದ ಯತಿ ವೃಷಭ ಸ್ವಾಮಿಯವರಿಂದ ಆರು ಸಾವಿರಗ್ರಂಥ ಪ್ರಮಾಣದ ಚೂರ್ಣಿ ರಚನೆಯಾದ ಸಂಗತಿ, ಆ ಬಳಿಕ ಇವರಿಂದ ಇದರ ಉಪದೇಶವನ್ನು ಪಡೆದ ಉಚ್ಛಾರಣಾಚಾರ್ಯದಿಂದ ಆ ಚೂರ್ಣಿಸೂತ್ರಗಳಿಗೆ ಉಚ್ಛಾರಣಾ ಸೂತ್ರ ಎಂಬ ಹೆಸರಿನ ಹನ್ನೆರಡು ಸಹಸ್ರಗ್ರಂಥ ಪ್ರಮಾಣದ ವೃತ್ತಿಯನ್ನು ರಚಿಸಿದ ಸಂಗತಿಯನ್ನು ಹೇಳಿ 'ಈ ರೀತಿಯಾಗಿ ಗುಣಧರ, ಯತಿ ವೃಷಭ ಮತ್ತುಉಚ್ಚಾರಣಾಚಾರ್ಯದಿಂದ ಗಾಥಾ, ಚೂರ್ಣಿ ಮತ್ತು ಉಚ್ಚಾರಣ ಸೂತ್ರಗಳೊಡನೆ'ಕಷಾಯ ಪ್ರಾಭೃತವು ಉಪಸಂಹೃತವಾಯಿತು' ಎಂದು ಹೇಳಿದ್ದಾರೆ. (ಶ್ಲೋ. ೧೫೯)ಇದರ ಅನಂತರದಲ್ಲಿ "ಈ ಪ್ರಕಾರ ದ್ವಿವಿಧವಾದ ದ್ರವ್ಯ ಭಾವ ಪುಸ್ತಕಗತವಾದ ಸಿದ್ಧಾಂತವು ಗುರುಪರಿಪಟಿಯಿಂದ ಬರುತ್ತಾ ಕೊಂಡಕುಂಡಪುರದಲ್ಲಿ ಶ್ರೀ ಪದ್ಮ ನಂದಿ ಮುನಿಯಿಂದ ತಿಳಿಯಲ್ಪಟ್ಟಿತು. ಅವನಾದರೋ ಷಟ್ಖಂಡಾಗಮದ ಮೊದಲ ಮೂರು ಖಂಡಗಳಿಗೆ ಹನ್ನೆರಡು ಸಾವಿರ ಗ್ರಂಥ ಪರಿಮಾಣದ 'ಪರಿಕರ್ಮ'ದ ಕರ್ತೃವಾಗಿದ್ದಾನೆ"(ಶ್ಲೋ ೧೫೯,೧೬೦)ಎಂದು ಹೇಳಿದೆ. ಇದರಿಂದ ಗಾಥಾ, ಚೂರ್ಣಿ ಮತ್ತು ಉಚ್ಚರಣಾ ಸೂತ್ರಗಳೊಡನೆ ಉಪಸಂಹೃತವಾದ ಕಷಾಯ ಪಾಹುಡವು ಪದ್ಮನಂದಿ (ಕುಂದಕುಂದ) ಸ್ವಾಮಿಯವರಿಗೆ ಗುರುಪರಿಪಾಟಿಯಿಂದ ಲಬ್ಧವಾಗಿದ್ದಿತು ಎಂದು ಸೂಚಿತವಾಗುವುದಲ್ಲದೆ ಗುಣಧರರು, ನಾಗಹಸ್ತಿಯವರು ಆರ್ಯಮಂಕ್ಷು ಅವರು, ಯತಿ ವೃಷಭರು ಮತ್ತು ಉಚ್ಚಾರಣಾಚಾರ್ಯರು–ಇವರೆಲ್ಲರೂಪದ್ಮನಂದಿಸ್ವಾಮಿಯವರಿಂದ ಹಿಂದಿನ ಕಾಲದವರೆಂದೂ ಸೂಚಿತವಾಗುವುದು.

ಪ್ರಸ್ತುತ ವಿಷಯದ ಬಗ್ಗೆ ಈ ಹಿಂದೆ ಸೂಚಿಸಿರುವ ಅನ್ಯ ವಿದ್ವಾಂಸರ ಅಭಿಪ್ರಾಯಗಳನ್ನು ಪರಿಶೀಲಿಸುವ ಮುನ್ನ ಪರಿಕರ್ಮದ ಕರ್ತೃ ಪದ್ಮನಂದಿಯವರ ಇತರಹೆಸರುಗಳ ಬಗ್ಗೆ ಒಂದೆರಡು

ಅಂಶಗಳನ್ನು ತಿಳಿದುಕೊಳ್ಳಬೇಕಾಗಿದೆ. ನಂದಿ ಆಮ್ನಾಯಪಟ್ಟವಲಿಯಲ್ಲಿ[೭] ಹೇಳಿರುವಂತೆ, (ಆಚಾರಂಗ ಶ್ರುತಧರ) ಭದ್ರಬಾಹು ಸ್ವಾಮಿಯವರ ಆದಿಯಾಗಿ ಐದನೆಯವರಾಗಿ ಹೆಸರಿಸಿರುವ ಕುಂದಕುಂದರಿಗೆ ಪದ್ಮನಂದಿ, ವಕ್ರಗ್ರೀವ, ಗೃದ್ಧ್ರಪಿಂಛ ಮತ್ತು ಏಲಾಚಾರ್ಯ ಎಂಬ ಮತ್ತೆ ನಾಲ್ಕು ಹೆಸರುಗಳಿದ್ದುವು. ೧೩೮೬ನೇ ಇಸವಿಯ ವಿಜಯನಗರದ ನಂದಿಸಂಘಕ್ಕೆ ಸೇರಿದ ಶಾಸನದಲ್ಲಿಯೂ ಇವರಿಗೆ ಕುಂದಕುಂದ ಮೊದಲಾದ ಐದು ಹೆಸರುಗಳಿದ್ದುವೆಂದು ಹೇಳಿದೆ.[೮] ಇವುಗಳಲ್ಲಿ ಪದ್ಮನಂದಿ ಮತ್ತು ಕುಂದಕುಂದ ಎಂಬೆರಡು ಹೆಸರುಗಳನ್ನು ಇವರು ಹೊಂದಿದ್ದ ಬಗ್ಗೆ ಆಧಾರಗಳು ದೊರಕುತ್ತವೆಯಾದರೆ ಇತರ ಹೆಸರುಗಳ ಬಗ್ಗೆ ಖಚಿತ ಆಧಾರಗಳು ಇಲ್ಲವಾಗಿವೆ. ಅಲ್ಲದೆ ಈ ಇತರ ಹೆಸರುಗಳಲ್ಲೊಂದಾದ ಗೃದ್ಧ್ರಪಿಂಛಾಚಾರ್ಯ ಎಂಬುದು ತತ್ವಾರ್ಥ ಸೂತ್ರ ರಚನಕಾರರ (ಉಮಾಸ್ವಾ(ತಿ)ಮಿಯವರ) ಹೆಸರಾಗಿದೆಯೆಂದು ಧವಲಾ ಮತ್ತಿತರ ಆಧಾರಗಳಿಂದ[೯] ತಿಳಿದುಬರುವುದು. ಈ ಹಿಂದೆ ಹೇಳಿದ ನಂ. ಆ. ಪಟ್ಟಾವಲಿಯಲ್ಲಿ ಉಮಾಸ್ವಾಮಿಯವರನ್ನುಕುಂದಕುಂದರ ಅನಂತರವರ್ತಿಯಾಗಿ ಆಚಾರ್ಯಪಟ್ಟಸ್ಥರಾದಂತೆ ಹೇಳಿದೆ. ಇದರಿಂದ ಗೃದ್ಧ್ರಪಿಂಛ ಎಂಬುದು ಕುಂದಕುಂದರ ಹೆಸರಾಗಿದ್ದಿರಲಾರದೆಂದು ತಿಳಿಯಲವಕಾಶವಾಗುವುದು. ಇನ್ನಿತರ ಹೆಸರುಗಳ ಬಗ್ಗೆ ಖಚಿತರೀತಿಯಿಂದ ಹೇಳಲಾಗು ವುದಿಲ್ಲ. ‘ಕುಂದಕುಂದ’ ಎಂಬ ಹೆಸರು ಮೂಲತಃ ‘ಕೊಂಡಕುಂದ’ ಎಂದಿದು ಕಾಲಾನುಕ್ರಮದಲ್ಲಿ ಸಂಸ್ಕೃತೀಕರಣ ಹೊಂದಿ ‘ಕುಂದಕುಂದ’ ಎಂದಾಗಿಯೆಂದುಸನ್ಮಾನ್ಯ ಎ. ಎನ್. ಉಪಾಧ್ಯೆಯವರು ಹೇಳಿದ್ದಾರೆ.[೧೦] ಪದ್ಮನಂದಿ ಎಂಬುದು ಈ ಆಚಾರ್ಯರ ಮುನಿಪರ್ಯಾರದ ಹೆಸರು.

’ಕುಂದಕುಂದ’ ಎಂಬುದು ಇವರ ಹುಟ್ಟೂರಾದ ’ಕೊಂಡಕುಂದ’ ಎಂಬ ಊರಿನ ಹೆಸರಿನ ಮೂಲದಿಂದ ಬಂದಿರುವುದೆಂದು ಪಿ. ಬಿ. ದೇಸಾಯಿಯವರು ಸ್ಪಷ್ಟಪಡಿಸಿದ್ದಾರೆ.[೧೧] ಈ ರೀತಿಯಾಗಿ ಹೊಟ್ಟೂರಿನ ಹೆಸರಿನಿಂದಲೇ ಮುನಿಗಳ ನಾಮನಿರ್ದೇಶನ ಮಾಡಿರುವುದಕ್ಕೆ ಉದಾಹರಣೆಗಳಿವೆ. ಇದಕ್ಕೆ ‘ತುಂಬಲೂರು ಆಚಾರ್ಯ’ ಎಂಬುದುಒಂದು ಉತ್ತಮ ನಿದರ್ಶನ. ಪದ್ಮನಂದಿ–ಕುಂದ ಕುಂದ ಸ್ವಾಮಿಯವರ ಉಪಲಬ್ಧಕೃತಿಗಳಲ್ಲಿ ಬಾರಸ ಅಣುವೆಕ್ಖ ಒಂದು. ಇದರ ಅಂತಿಮ ಗಾಹೆಯಲ್ಲಿ ‘ಇದಿ ಣೆ ಚ್ಛಯವವಹಾರಂ ಭಣಿಯಂ ಕುಂದಕುಂದ ಮುಣಿಣಾಹೇ’ಎಂದು ಹೇಳಿದೆ.

ಕುಂದಕುಂದಾಚಾರ್ಯರು ತತ್ತ್ವ ಪ್ರರೂಪಣೆ ಮಾಡುವಲ್ಲಿ ನಿಶ್ಚಯನಯಕ್ಕೆ ಪ್ರಾಧಾನ್ಯತೆ ಯಿತ್ತಿರುವರಾದರೂ ವ್ಯವಹಾರನಯದ ಅತ್ಯಗತ್ಯವನ್ನೂ ಹೇಳಿದ್ದಾರೆ.[೧೨] ಈ ದೃಷ್ಟಿ ಯಿಂದ ಪರಿಗಣನೆ ಮಾಡಿದಲ್ಲಿ ಬಾರಸ ಅಣುವೆಕ್ಖದ, ಮೇಲೆಹೇಳಿರುವ, ಉಕ್ತಿಯುಸ್ವತಃ ಕುಂದಕುಂದಾರ್ಯದೇ ಆಗಿದೆಯೆಂದು ತಿಳಿಯಬಹುದಾಗಿದೆ. ಆದ್ದರಿಂದ ಇದನ್ನು ಕುಂದಕುಂದಾಚಾರ್ಯರ ಹೆಸರಿನ ಅತ್ಯಂತ ಪ್ರಾಚೀನ ದಾಖಲಾತಿಯೆಂದುಗಣನೆ ಮಾಡಬಹುದಾಗಿದೆ.

ಶ್ರುತಾವತಾರದಲ್ಲಿ ಕುಂದಕುಂದಪುರದ ಹೆಸರಿನೊಡನೆ ಪದ್ಮನಂದಿಯವರನ್ನುಹೆಸರಿಸಿರುವುದನ್ನು ಹಿಂದೆ ಉಲ್ಲೇಖಿಸಿದೆ. ಇದರಿಂದ ಪದ್ಮನಂದಿಯವರು ಕುಂದಕುಂದ ಗ್ರಾಮದವರಾಗಿರುವರೆಂಬ ಸೂಚನೆ ದೊರೆಯುವುದಾದ್ದರಿಂದ ಪದ್ಮನಂದಿಯವರಿಗೇ ಕುಂದಕುಂದ ಎಂಬುದು ಮತ್ತೊಂದು ಹೆಸರಾಗಿರಿವುದೆಂದು ತಿಳಿಯಲವಕಾಶವಾಗುವುದು. ಈ ಪದ್ಮನಂದಿಯವರನ್ನು ಕುರಿತು ಪವಾಡದಂತಹ ಘಟನೆಗಳನ್ನೊಳಗೊಂಡ ಐತಿಹ್ಯಗಳು ಪ್ರಚಲಿತವಾಗಿವೆ. ಇಂತಹವುಗಳಲ್ಲಿ ಒಂದು–ಇವರು ವಿದೇಹ ಕ್ಷೇತ್ರದ ಶ್ರೀಮಂದರ ತೀರ್ಥಂಕರರ ಬಳಿ ಹೋಗಿ ಸಿದ್ಧಾಂತದಯಾವುದೋ ಒಂದು ಅಂಶದ ಬಗ್ಗೆ ತಮಗಿದ್ದ ಸಂದೇಹವನ್ನು ಪರಿಹರಿಸಿಕೊಂಡುದಕ್ಕೆ ಸಂಬಂಧಿಸಿದುದಾಗಿದೆ. ಇವರು ವಿದೇಹ ಕ್ಷೇತ್ರದಿಂದ ಆಕಾಶಮಾರ್ಗವಾಗಿ ಪ್ರಯಾಣಮಾಡುವಾಗ ನವಿಲುಗರಿಯ ಪಿಂಛ ಕೈತಪ್ಪಿ ಕೆಳಗೆ ಬಿದ್ದು ಹೋಗಲಾಗಿ,ಹದ್ದಿನ (ಗೃಧ್ರ) ಗರಿಯಿಂದಾದ ಪಿಂಛದ ಉಪಯೋಗ ಪಡೆದರು–ಎಂಬುದು.ಇಂತಹುದಾದ ಒಂದು ಐತಿಹ್ಯವು ಕ್ರಿ.ಶ. ೯ನೇ ಶತಮಾನದಲ್ಲಿ ಪ್ರಚಲಿತವಿದ್ದಿತೆಂದುಹೇಳಲು ಆಧಾರವಿದೆ. ವಿಕ್ರಮ ಸಂ. ೯೯೦ರಲ್ಲಿ (ಇಸ್ವಿ ೯೩೨ರಲ್ಲಿ) ದೇವಸೇನರಿಂದ ರಚಿತವಾಗಿರುವ ಕೃತಿ ದರ್ಶನಸಾರದಲ್ಲಿ "ಶ್ರೀ ಮಂದರ ಸ್ವಾಮಿಯ ದಿವ್ಯಜ್ಞಾನದ ಮೂಲಕ ಪದ್ಮನಂದಿ ಮುನಿನಾಥನು ವಿಬೋಧಿತನಾಗದಿದ್ದಲ್ಲಿ ಶ್ರಮಣನು ಹೇಗೆತಾನೇ ಸುಮಾರ್ಗವನ್ನು ತಿಳಿಯಲಾಗುತ್ತಿದ್ದಿತು?[೧೩] ಎಂದು ಹೇಳಿದೆ. ಇದನ್ನು ಪುಷ್ಟೀಕರಿಸುವ ಹೇಳಿಕೆ 'ಪಂಚಾಸ್ತಿಕಾಯ'ದ ಜಯಸೇನಾಚಾರ್ಯವಿರಚಿತ ತಾತ್ಪರ್ಯ ವೃತ್ತಿಯ ಪ್ರಾರಭದಲ್ಲಿದೆ : ಇದರಂತೆ 'ಶ್ರೀಮದ್ ಕುಂದಕುಂದಾಚಾರ್ಯರು ಕುಮಾರನಂದಿಸಿದ್ಧಾಂತಿದೇವರ ಶಿಷ್ಯರು. ಇವರಿಗೆ ಪದ್ಮನಂದಿ ಮುಂತಾದ ಬೇರೆ ಹೆಸರುಗಳಿದ್ದವು. ಪ್ರಸಿದ್ಧ ಕಥಾನುಸಾರವಾಗಿ ಇವರು ಪೂರ್ವ ವಿದೇಹಕ್ಕೆ

ಹೋಗಿಸರ್ವಜ್ಞ ಸೀಮಂಧರ ಸ್ವಾಮಿಯ ದರ್ಶನ ಮಾಡಿದರು. ಅವರ ಮುಖ ಕಮಲದಿಂದ ಹೊರಟ ದಿವ್ಯ ಧ್ವನಿಯ ಶ್ರವಣದಿಂದ ತಿಳಿದ ಪದಾರ್ಥದ ಮೂಲಕಶುದ್ಧಾತ್ಮತತ್ವಾದಿ ಸಾರಭೂತವಾದ ಅರ್ಥವನ್ನು ಗ್ರಹಣೆ ಮಾಡಿದರು. ಅಲ್ಲಿಂದಹಿಂದಿರುಗಿ ಬಂದು ಅಂತಃತತ್ವ ಮತ್ತು ಬಹಿಃತತ್ವಗಳ ಗೌಣ ಹಾಗೂ ಮುಖ್ಯಪ್ರತಿಪಾದನೆಯ ಕಾರಣವಾಗಿ ಅಥವಾ ಸಂಕ್ಷೇಪರುಚಿ ಶಿವಕುಮಾರ ಮಹಾ ರಾಜರೇಮುಂತಾದವರ ಬೋಧನಾರ್ಥವಾಗಿ ಪಂಚಾಸ್ತಿಕಾಯಶಾಸ್ತ್ರದ ರಚನೆಮಾಡಿದರು.[೧೪]

ಈ ಹೇಳಿಕೆಯಿಂದ ಕುಂದಕುಂದಾಚಾರ್ಯರಿಗೆ ಪದ್ಮನಂದಿ ಎಂಬ ಮತ್ತೊಂದು ಹೆಸರಿದ್ದಿತೆಂದು ಮತ್ತೂ ದೃಢಪಡುವುದಲ್ಲದೆ ಪಂಚಾಸ್ತಿಕಾಯವು ಕುಂದಕುದ–ಪದ್ಮನಂದಿಯವರ ರಚನೆಯಾಗಿರುವುದೆಂದು ಅಧಿಗತವಾಗುವುದು. ಕುಂದಕುಂದಾ ಚಾರ್ಯರನ್ನು ಹೆಸರಿಸಿರುವ ಮತ್ತೊಂದು ರಚನೆಯೆಂದರೆ ನಿಯಮಸಾರದ ಪದ್ಮಪ್ರಭ ಮಲಧಾರಿಯವರಿಂದ ರಚಿತವಾಗಿರುವ ತಾತ್ಪರ್ಯ ವೃತ್ತಿ. ಈ ತಾತ್ಪರ್ಯವೃತ್ತಿಯ ಮಂಗಲಾದಿ ಉಪೋದ್ಘಾತದಲ್ಲಿ "ಪಂಚಸ್ತಿಕಾಯ, ಷಡ್ದ್ರವ್ಯ, ಸಪ್ತತತ್ವನವಪದಾರ್ಥಗಗಳು, ಪ್ರತ್ಯಾಖ್ಯಾನಾದಿ ಸತ್ಕ್ರಿಯೆಗಳು ಸೂತ್ರಕಾರನಿಂದ ಹಿಂದೆ(ಪೂರ್ವಂ) ಹೇಳಲ್ಪಟ್ಟಿವೆ" ಎಂದು ಹೇಳಿದ್ದಾರೆ ಅನಂತರ ಮೂಲಗ್ರಂಥ(ನಿಯಮಸಾರ)ದ ಮಂಗಲಾಚರಣೆಯ ವ್ಯಾಖ್ಯಾನದಲ್ಲಿ "ವಿಶಿಷ್ಟ ಇಷ್ಟ ದೇವತಾ ಸ್ತವನದ ಅನಂತರ ಸೂತ್ರಕರ್ತೃ–ಪೂರ್ವಸೂರಿ–ಶ್ರೀಕುಂದಕುಂದಾಚಾರ್ಯದೇವ ಗುರುವು ಕೇವಲಿ, ಶ್ರುತಕೇವಲಿಗಳಿಂದ ಭಣಿತವಾಗಿರುವ 'ನಿಯಮಸಾರ' ಎಂಬ ಹೆಸರಿನಪರಮಾಗಮಗಳನ್ನು ಹೇಳುವುದಾಗಿ ಪ್ರತಿಜ್ಞೆ ಮಾಡಿರುವರು ಎಂದು ಹೇಳಿದ್ದಾರೆ. ಈ ಹೇಳಿಕೆಗಳಿಂದ ಪಂಚಾಸ್ತಿಕಾಯ ಮುಂತಾದ ಗ್ರಂಥಗಳು ಹಾಗೂ ನಿಯಮಸಾರವುಕುಂದಕುಂದಸ್ವಾಮಿಯವರ ರಚನೆಗಳಾಗಿವೆಯೆಂದು ಈ ತಾತ್ಪರ್ಯ ವೃತ್ತಿಕಾರರ ಅಭಿಮತವಾಗಿದೆ ಯೆಂದು ಸ್ಪಷ್ಟವಾಗುವುದು.

ಈ ಎಲ್ಲ ಮೇಲಿನ ಹೇಳಿಕೆಗಳಿಂದ ಪಂಚಾಸ್ತಿಕಾಯ, ನಿಯಮಸಾರ, ಬಾರಸ ಅಣುವೆಕ್ಖ(ದ್ವಾದಶಾನುಪ್ರೇಕ್ಷೆ)ಗಳು ಕುಂದಕುಂದಾಚಾರ್ಯರ ರಚನೆಗಳಾಗಿವೆಯೆಂದು ನಿಶ್ಚಿತವಾಗುವುದಲ್ಲದೆ, ಪರಂಪರಾನುಗತವಾಗಿ ಇವರದೇ ರಚನೆಗಳಾಗಿವೆಯೆಂದು ಹೇಳಲಾಗಿರುವ, ಪ್ರವಚನಾಸಾರ, ಸಮಯಸಾರ, ಮತ್ತು ಅಷ್ಟಪಾಹುಡಗಳೂ ಇವರ ಕೃತಿಗಳೇ ಆಗಿವೆಯೆಂದು

ಪರಿಗಣನೆ ಮಾಡಬಹುದಾಗಿದೆ.ಇದರಂತೆ'ಕುಂದಕುಂದಪುರ'ದಲ್ಲಿ ಪದ್ಮ ನಂದಿಯವರು ಷಟ್ಖಂಡಾಗಮದ ಮೊದಲ ಮೂರುಖಂಡಗಳಿಗೆ 'ಪರಿಕರ್ಮ' ಎಂಬ ವೃತ್ತಿಯನ್ನು ರಚಿಸಿದರು, ಎಂಬ ಶ್ರುತಾವತಾರದಹೇಳಿಕೆಯು ಯಥಾರ್ಥವಾದುದಾಗಿದೆಯೆಂದು ತಿಳಿಯಬಹುದು. ಆದರೆ ಕುಂದಕುಂದಾಚಾರ್ಯರ ಬಗ್ಗೆ, ಅವರ ಕೃತಿಗಳ ಬಗ್ಗೆ, ವಿಶೇಷತಃ ಪ್ರವಚನಸಾರದ ಬಗ್ಗೆಗಹನವಾದ ಸಂಶೋಧನಾತ್ಮಕ ಅಧ್ಯಯನವನ್ನು ನಡೆಸಿರುವ ಡಾ. ಎ. ಎನ್.ಉಪಾಧ್ಯೆಯವರು ಶ್ರುತಾವತಾರದ ಈ ಹೇಳಿಕೆ ಸತ್ಯನಿಷ್ಠವಾದುದಲ್ಲವೆಂದು ಮೊದಲಿಗೆ ಅಭಿಪ್ರಾಯಪಟ್ಟಿರಾದರೂ[೧೫] ಆನಂತರದಲ್ಲಿ ತಮ್ಮ ಅಭಿಪ್ರಾಯವನ್ನು ಬದಲಿಸಿಕೊಡಿದ್ದಾರೆ.[೧೫]

ಈ ಪರಿಕರ್ಮಟೀಕೆಯ ಬಗ್ಗೆ ಇರುವ ಮತ್ತೊಂದು ಅಪವಾದಾತ್ಮಕ ಹೇಲಿಕೆಯನ್ನುಇಲ್ಲಿ ಪರ್ಯಾಲೋಚನೆ ಮಾಡಬೇಕಾಗಿದೆ. ಜಯಧವಲಾ ಸಹಿತ ಕಸಾಯಪಾಹುಡಭಾಗಗರ ಪ್ರಸ್ತಾವನೆಯಲ್ಲಿ (ಪ್ರ. ಸಂ. ೩೪) ಜಯಧವಲಾದ ಒಂದು ವಾಕ್ಯವನ್ನುಉದ್ಧರಿಸಿ ಅಲ್ಲಿ ಪ್ರಯುಕ್ತವಾಗಿರುವ 'ಪರಿಯಮ್ಮೇಣ' ಎಂಬ ಪದವು ಗಣಿತ ಶಾಸ್ತ್ರದ ಸೂಚಕವಾಗಿರುವುದೆಂದು ಹೇಳಿದೆ. ಮತ್ತೆ ಮುಂದುವರಿದು, 'ಧವಲಾದಲ್ಲಿಯೂ ಇದರ ಉಲ್ಲೇಖ ಬಹುತರವಾಗಿ ಕಂಡು ಬರುತ್ತದೆ. ಧವಲಾ ಸಂಪಾದಕರು ಮೊದಲಿಗೆಪರಿಕರ್ಮವು ಕುಂದಕುಂದಾಚಾರ್ಯಕೃತವಾದ ಯಾವುದೋ (?) ಒಂದು ವ್ಯಾಖ್ಯಾಗ್ರಂಥವೆಂಬ ಅಭಿಪ್ರಾಯ ಹೊಂದಿಂದ್ದರು. ಆದರೆ ಅನಂತರ ಅದರಲ್ಲಿ ಗಣಿತಶಾಸ್ತ್ರದಉದ್ಧರಣಗಳನ್ನು ಕಂಡು ಅವರಿಗೂ ಇದು ಗಣಿತಶಾಸ್ತ್ರದ ಯಾವುದೋ ಗ್ರಂಥವಾಗಿದೆಇಂಬ ವಿಚಾರ ಮೂಡಿತು' ಎಂದು ಹೇಳಿದೆ. ಈ ರೀತಿಯಾಗಿ ಧವಲಾ ಸಂಪಾದಕರುತಮ್ಮ ಮೊದಲಿನ ಅಭಿಮತವನ್ನು ಬದಲಿಸಿಕೊಡುದರ ಸಂಗತಿಯನ್ನು ಎಲ್ಲಿಹೇಳಿದ್ದಾರೆಂಬುದನ್ನು ಮಾತ್ರ ತಿಳಿಸಿಲ್ಲ. ಇದೂ ಅಲ್ಲದೆ, ಧವಲಾ ಸಂಪಾದನ ಕಾರ್ಯದಲ್ಲಿ ದಿವಂಗತ ಮಾನ್ಯ ಪಂ. ಫೂಲ್ ಚಂದ್ರ ಸಿದ್ಧಾಂತ ಶಾಸ್ತ್ರಿಯವರು ಸಹಭಾಗಿಗಳಾಗಿದ್ದರು. ಇವರು ಮೇಲೆ ಹೇಳಿದ ಕಸಾಯಪಾಹಿಡದ ಮುಖ್ಯ ಸಂಪಾದಕರೂಆಗಿರುವ ಮತ್ತು ಈ ಗಂಥ್ರವು ೧೯೪೪ನೇ ಇಸವಿಯಲ್ಲಿ ಪ್ರಕಾಶಿತವಾಗಿದೆ. ಇದರಪ್ರಸ್ತಾವನೆಯಲ್ಲಿ ಹೇಳಿರುವ 'ಪರಿಕರ್ಮವು ಒಂದು ಗಣಿತ ಶಾಸ್ತ್ರಗ್ರಂಥವಾಗಿದೆ'ಎಂಬ ಅಭಿಪ್ರಾಯವು ಇವರ ಸಹಮತ ಹೊದಿದೆ ಎಂಬುದರ ಬಗ್ಗೆ

ಎರಡನೆಯಮಾತಿಲ್ಲ. ಆದರೆ 'ಕುಂದಕುಂದರ' ಪರಿಕರ್ಮವೃತ್ತಿಯನ್ನು ರಚಿಸಿರುವುದರ ಸಮರ್ಥನೆ ಮಾಡಿರುವ ಪ್ರಸ್ತಾವನೆ ಹೊದಿರುವ, ೧೯೩೯ನೇ ಇಸವಿಯಲ್ಲಿ ಪ್ರಕಾಶಿತವಾಗಿರುವ ಷಟ್ಖಂಡಾಗಮ, ಸತ್ಪ್ರರೂಪಣಾ ಪುಸ್ತಕ ೧ಕ್ಕೂ ಈ ಮಹನೀಯರು ಸಹಸಂಪಾದಕರಾಗಿದ್ದರು.

ಅಲ್ಲದೆ ಈ ಕೃತಿಯ ಎರಡನೇ ಆವೃತ್ತ್ಯು ೧೯೭೩ನೇ ಇಸವಿಯಲ್ಲಿಯೂ ಮತ್ತು ಮೂರನೇ ಆವೃತ್ತ್ಯು ೧೯೯೨ನೇ ಇಸವಿಯಲ್ಲಿಯೂ ಪ್ರಕಾಶಿತವಾಗಿದೆ. ಈ ಆವೃತ್ತಿಗಳ ಪ್ರಕಾಶನದಲ್ಲಿಯೂ ದಿ. ಸನ್ಮಾನ್ಯ ಫೂಲ್ ಚಂದ್ರ ಸಿದ್ದಾಂತ ಶಾಸ್ತ್ರೀಯವರುಸಹಭಾಗಿಯಾಗಿದ್ದಾರೆ. (ಮೂರನೇ ಆವೃತ್ತಿಯ ಪ್ರಕಾಶನ ಸಮಯಕ್ಕೆ ಇವರು ದಿವಂಗತರಾಗಿದ್ದ್ರೆಂದು 'ಸಂಪಾದಕ–ಸ್ವ–ಪಂ, ಫೂಲಚಂದ್ರ ಸಿದ್ದಾಂತ ಶಾಸ್ತ್ರಿ'ಎಂಬುವರಿಂದ ಸೂಚಿತವಾಗುತ್ತದೆ.) ಕುಂದಕುಂದರ 'ಪರಿಕರ್ಮ' ವೃತ್ತಿ ಬಗ್ಗೆಮೊದಲನೆಯ ಪ್ರಕಾಶನದ ಪ್ರಸ್ತಾವನೆಯಲ್ಲಿ ಏನು ಹೇಳಲಾಗಿದ್ದಿತೋ ಅದೇಹೇಳಿಕೆಯ ಯಥಾವತ್ತಾದ ಪುನರುಕ್ತಿಯು ಮೂರನೇ ಆವೃತ್ತಿಯಯೂ ಇದೆ.ಇದರ ಬಗ್ಗೆ ಭಿನ್ನಮತ ಅಥವಾ ಸಂಶಯ ವ್ಯಕ್ತಪಡಿಸುವಂತಹ ಒಂದು ಟಿಪ್ಪಣಿಯೂಇಲ್ಲವಾಗಿದೆ. ಕಸಾಯಪಾಹುಡದ ಪ್ರಸ್ತಾವನೆಯಲ್ಲಿ, ಮೇಲೆ ಹೇಳಿರುವಂತೆ ಕುಂದಕುಂದರ ಪರಿಕರ್ಮ ರಚನೆಯ ಬಗ್ಗೆ ಸಂಶಯ ಬಂದಿದ್ದಲ್ಲಿ ಅದನ್ನು ಸತ್ಪ್ರರೂಪಣಾದ೨ನೇ ಆವೃತ್ತಿ ಅಥವಾ ೩ನೇ ಆವೃತ್ತಿಯಲ್ಲಿ ಒಂದು ಟಿಪ್ಪಣಿಯ ಮೂಲಕವಾದರೂ ಸೂಚಿಸಬಹುದ್ದಿತು. ಹೀಗಿರುವಲ್ಲಿ ೧೯೪೪ನೇ ಇಸವಿಯಲ್ಲಿ ಪ್ರಕಟವಾಗಿರುವಜಯಧವಲಾ–ಕಸಾಯಪಾಹುಡದ ಪ್ರಸ್ತಾವನೆಯಲ್ಲಿ ಕುಂದಕುಂದರಿಂದ ರಚಿತವಾಗಿರುವ ಪರಿಕರ್ಮದ ಬಗ್ಗೆ ಸಂಶಯ ವ್ಯಕ್ತಪಡಿಸಿರುವುದರ ಔಚಿತ್ಯವು ಪ್ರಶ್ನಾರ್ಹವಾಗುತ್ತದೆ. ಇಲ್ಲಿ ಹೇಳಲಾಗಿರುವಂತೆ ಗಣಿತಶಾಸ್ತ್ರ ಸಂಬಂಧಿಯಾದ ಗ್ರಂಥವೊಂದನ್ನು 'ಪರಿಕರ್ಮ'ವೆಂದು ಹೆಸರಿಸಿದ್ದಲ್ಲಿ ಅದು ಕುಂದಕುಂದರ 'ಪರಿಕರ್ಮ'ದಸೂಚಕವಾಗಿರದೆ, ದೃಷ್ಟಿವಾದಾಂಗದ, ಮೊದಲನೆಯ ವಿಭಾಗವಾದ 'ಪರಿಯಮ್ಮ'(ಪರಿಕರ್ಮ)ದ ಸೂಚಕವಾಗಿರಬಹುದೆ ? ಎಂಬುದು ವಿಚಾರಾರ್ಹವಾಗಿದೆ. ಆದ್ದರಿಂದಷಟ್ಖಂಡಾ ಗಮದ ಮೊದಲ ಮೂರು ಖಂಡಗಳಿಗೆ ಸೀಮಿತವಾಗಿ ಸೂಚಿತವಿರುವಪರಿಕರ್ಮದಲ್ಲಿ ಗಣಿತ ವಿಷಯವಲ್ಲದಿರುವಂತಹುದು 'ಪರಿಕರ್ಮ'ವೃತ್ತಿಯಾಗಿರುವುದೆಂದು ಗ್ರಹಿಸುವುದು ಸೂಕ್ತವಿದೆ.

ಷಟ್ ಖಂಡಾಗಮದ ಮೊದಲ ಮೂರು ಖಂಡಗಳಿಗೆ ಪರಿಕರ್ಮ ಟೀಕೆಯನ್ನುರಚಿಸಿರುವ ಕುಂದಕುಂದ ಸ್ವಾಮಿಯವರು ಮತ್ತು ಪಂಚಾಸ್ತಿಕಾಯ ಮುಂತಾದಗ್ರಂಥಗಳ ಕೃರ್ತಾಗಳಾದ ಕುಂದಕುಂದಸ್ವಾಮಿಯವರು ಬೇರೆ ಬೇರೆ ವ್ಯಕ್ತಿಗಳಾಗಿರುವರೆಂಬ ಒಂದು ವಾದವೂ ಇದೆ. ಇದು ಮುಂದಿನಂತಿದೆ[೧೬] ('ಬಾರಸಅಣುವೆಕ್ಖ'ದ)ಸಂಪಾದಕ ಮಹೋದಯರು (ಈ ಗ್ರಂಥದ ಕರ್ತೃ) ಕುಂದಕುಂದ ಸ್ವಾಮಿಯವರನ್ನುಕ್ರಿ. ಶ. ೨ನೇ ಶತಮಾನದಲ್ಲಿ ನಂದಿಸಂಘದ ಆಚಾರ್ಯರೂ ಷಟ್ಖಂಡಾಗಮದಪರಿಕರ್ಮ ಟೀಕಾಕಾರರೂ ಆದ ಕುಂದಕುಂದ–ಪದ್ಮನಂದಿಯವರೆಂದು ಗುರುತಿಸಿದ್ದಾರೆ. ಆದರೆ ಈಗ ಅಧಿಕಾಂಶ ವಿದ್ವಾಂಸರು ಈ ಇಬ್ಬರು ಆಚಾರ್ಯರನ್ನು ಬೇರೆಬೇರೆಯವನ್ನಾಗಿ ಮಾನ್ಯ ಮಾಡಿದ್ದಾರೆ. ದಿಗಂಬರ ಆಮ್ನಾಯದ ಪ್ರಮುಖ ಪಕ್ಷಧರರು ಮಂಗಲಶ್ಲೋಕದಲ್ಲಿ ಪ್ರಾತಃಸ್ಮರಣೀಯ ಹಾಗೂ ಪ್ರಾಭೃತತ್ರಯ (ಸಮಯಸಾರ, ಪ್ರವಚನಸಾರ ಮತ್ತು ಪಂಚಾಸ್ತಿಕಾಯ) ಕರ್ತೃ ಭಗವತ್ ಕುಂದಕುಂದಾ ಚಾರ್ಯರನ್ನು ಈಗ ಶ್ರುತಕೇವಲೀ ಭದ್ರಬಾಹು ಸ್ವಾಮಿಯವರ ಪ್ರತ್ಯಕ್ಷ ಶಿಷ್ಯರೆಂದು ಹಾಗೂ ಶ್ವೇತಾಂಬರ ಅಮ್ನಾಯದ ಪ್ರಥಮ ಆಚಾರ್ಯ ಸ್ಥೂಲಭದ್ರರ ಸಮಕಾಲೀನ ಕ್ರಿ. ಪೂ. ನಾಲ್ಕನೇ ಶತಮಾನದ ಆಚಾರ್ಯರೆಂದು ಮಾನ್ಯ ಮಾಡಲಾಗಿದೆ. ಆಚಾರ್ಯರು ತಮ್ಮ ಕೃತಿಗಳಲ್ಲಿ ಒಂದಕ್ಕಿಂತಲೂ ಹೆಚ್ಚಿನ ಬಾರಿ 'ಶ್ರುತಕೇವಲಿಯವರು ಹೇಗೆ ಹೇಳಿರುವರೋ ಅದನ್ನೇ ನಾನು ಹೇಳಿದ್ದೇನೆ' ಎಂದು ಸ್ಪಷ್ಟಪಡಿಸಿದ್ದಾರೆ. ಅವರು ಸ್ವಯಂ ತಮ್ಮನ್ನು ಶ್ರುತಕೇವಲಿ ಭದ್ರಬಾಹುಸ್ವಾಮಿಯವರನ್ನು ತಮ್ಮ ಗಮಕ ಗುರುವೆಂದು ಕರೆದುಕೊಡಿದ್ದಾರೆ.ಇದರ ಅರ್ಥವನ್ನು ಕೆಲವರು ವಿದ್ವಾಂಸರು 'ಪರಂಪರಾಗತ ಗುರು' ಎಂದು ಹೇಳಿರುವರು. ಆದರೆ ಇದಕ್ಕೆ 'ಯಾವ ಗುರುವಿನಿಂದ ಗ್ರಂಥ ರಚಿಸಲುಪ್ರೇರಣೆ ದೊರೆಯಿತೋ ಆ ಗುರು' ಎಂಬ ಅರ್ಥವೂ ಆಗಬಹುದು

ಮೇಲೆ ಹೇಳಿರುವಂತೆ ಶ್ರುತಕೇವಲಿ ಭದ್ರಬಾಹು ಸ್ವಾಮಿಯವರ ಪ್ರತ್ಯಕ್ಷ ಶಿಷ್ಯರೂ, ಸ್ಥೂಲಭದ್ರ ಸ್ವಾಮಿಯವರ ಸಮಕಾಲೀನರೂ ಆದ ಮುನಿವರರೊಬ್ಬರು ರಚಿಸಿದ ಗ್ರಂಥಗಳು ನಮಗೆ ಉಳಿದು ಬಂದಿವೆ. ಮತ್ತು ಆ ಗ್ರಂಥಕರ್ತೃ ಮುತ್ತಾರೂ ಆಗಿರದೆ ಕುಂದಕುಂದ ಸ್ವಾಮಿಯವರೇ ಆಗಿದ್ದಾರೆ ಎಂಬುದು ಐತಿಹಾಸಿಕವಾಗಿ ಪ್ರಮಾಣೀಕೃತವಾಗಬಹುದಾದಲ್ಲಿ ದಿಗಂಬರ ಪಂಥದ ಯಾವ ವ್ಯಕ್ತಿಗೇ

ಆಗಲಿ ಮಹದಾನಂದದ ಸಂಗತಿಯಾಗುವುದು. ಆದರೆ ಐತಿಹಾಸಿಕ ಸಮೀಕ್ಷೆಯಿಂದ ಇದು ಪ್ರಮಾಣೀಕೃತವಾಗು ವುದಿಲ್ಲವೆಂಬುದನ್ನು ಇಲ್ಲಿ ತಿಳಿಯಬೇಕಾಗಿದೆ. ಮೇಲೆ, ಶೋಧಾದರ್ಶದಲ್ಲಿ ಸೂಚಿಸಿ ರುವಂತೆ, ಕುಂದಕುಂದ ಸ್ವಾಮಿಯವರು, ತಮ್ಮನ್ನು 'ಭದ್ರಬಾಹುವಿನ ಶಿಷ್ಯ' ಮತ್ತು ದ್ವಾದಶಾಂಗ ಚತುರ್ದಶ ಪೂರ್ವ ಶ್ರುತಜ್ಞಾನಿ ಭದ್ರಬಾಹು ಅವರು ತಮ್ಮ 'ಗಮಯ ಗುರು' ಎಂದು ಹೇಳಿಕೊಡಿರುವ ಬೋಧ ಪಾಹುಡದ ಗಾಹೆಗಳು ಮುಂದಿನಂತಿವೆ:

ಸದ್ದವಿಯಾರೋ ಹೂಓ ಭಾಸಾ ಸುತ್ತೇ ಸು ಜಂ ಜಿಣೇ ಕಹಿಯಂ ।

ಸೋ ತಹ ಕಹಿಯಂ ಣಾಯಂ ಸೀಸೇಣ ಯ ಭದ್ದಬಾಹುಸ್ಸ ॥

ಬಾರಸ–ಅಂಗ ವಿಯಾಣಂ ಚಉದಸ–ಪುವ್ವಂಗ–ವಿಊಲ–ವಿತ್ಥರಣಂ ।

ಸುಯ–ಣಾಣಿ–ಭದ್ದಬಾಹೂ ಗಮಯ–ಗುರೂ ಭಯವಓ ಜಯಊ ॥

ಮೇಲಿನ ಎರಡು ಗಾಹೆಗಳಲ್ಲಿ, ಎರಡನೆಯದರಲ್ಲಿ ಕಾಣಿಸಲಾಗಿರುವ ಶ್ರುತಜ್ಞಾನಿ ಭದ್ರಬಾಹು ಸ್ವಾಮಿಯವರು, ದ್ವಾದಶಾಂಗ ಚತುರ್ದಶ ಪೂರ್ವಿ ಶ್ರುತಕೇವಲಿ ಭದ್ರ ಬಾಹುಸ್ವಾಮಿಗಳಾಗಿರುವರೆಂಬುದರ ಬಗ್ಗೆ ಯಾವ ಸಂಶಯಕ್ಕೂ ಎಡೆಯಿಲ್ಲ ಮತ್ತು ಇವರನ್ನು ಕುಂದಕುಂದ ಸ್ವಾಮಿಯವರು, ತಮ್ಮ ಪ್ರತ್ಯಕ್ಷ ಗುರುವೆಂದೇನೂ ಹೇಳಿಲ್ಲ ವೆಂಬುದಲ್ಲದೆ ಸ್ಪಷ್ಟ ರೀತಿಯಿಂದ 'ಗಮಯಗರು' ಎಂದು ಹೇಳಿರುವುದು ಸ್ಪಷ್ಟವಿದೆ. ಇಲ್ಲಿ ಪ್ರಯುಕ್ತವಿರುವ ಗಮಯ (ಗಮಕ) ಪದವನ್ನು ಅಕಲಂಕರ ರಾಜವಾರ್ತಿಕದಲ್ಲಿ 'ಜ್ಞಾಪಕ' ಎಂಬರ್ಥದಲ್ಲಿ ಹೇಳಲಾಗಿರುವುದು ಪ್ರಕೃತ ಸಂದರ್ಭದಲ್ಲಿ ಗಮನಾರ್ಹ ವಾಗಿದೆ. (ರಾ. ವಾ. ೧–೧–೭೫) ಹೀಗೆಯೇ ಷಡ್ ದರ್ಶನ ಸಮುಚ್ಚಯದ ಟೀಕಾಕಾರ ಗುಣರತ್ನರು 'ಪ್ರಸಾದ–ಲಿಂಗಂ–ಗಮಕಂ' ಎಂದು ಸಾಂಖ್ಯಕಾರಿಕಾ ಕಾರಿಕೆ ೨ರ ಟೀಕೆ ಯಲ್ಲಿ ಹೇಳಿರುವುದು ಗಮನಾರ್ಹವಾಗಿದೆ. ಇಷ್ಟಾದರೂ ಈ ಗಮಯ (ಗಮಕ) ಗುರು ಎಂಬುದಕ್ಕೆ ಕೆಲವು ವಿದ್ವಾಂಸರು ಪರಂಪರಾಗತ ಗುರು ಎಂಬ ಅರ್ಥಕೊಟ್ಟಿದ್ದಾರೆ. ಆದರೆ ಇದಕ್ಕೆ 'ಯಾವ ಗುರುವಿನಿಂದಗ್ರಂಥ ರಚನೆಗೆ ಪ್ರೇರಣೆ ದೊರೆಯಿತೋ ಆ ಗುರು' ಎಂಬ ಅರ್ಥವೂ ಆಗುವುದು ಎಂದು ಶೋಧಾದರ್ಶದಲ್ಲಿ ಹೇಳಿರುವುದು ಈ ಹಿಂದಿನ ಉಲ್ಲೇಖದಿಂದ ಸ್ಪಷ್ಟವಾಗಿದೆ. ಈ ಎರಡನೆ ಅರ್ಥದ ಸಾಧುತ್ವ ಅಥವಾ ಅಸಾಧುತ್ವದ ಬಗ್ಗೆ ಇಲ್ಲಿ ಚರ್ಚೆ ಅನಗತ್ಯ. ಆದರೆ

ದ್ವಾದಶಾಂಗ ಚತುರ್ದಶಪೂರ್ವಿ ಶ್ರುತಕೇವಲಿ ಭದ್ರಬಾಹುಸ್ವಾಮಿಯವರಿಂದ ಕುಂದಕುಂದ ಸ್ವಾಮಿಯವರಿಗೆ ಗ್ರಂಥ ರಚನೆಗೆ ಸಾಕ್ಷಾತ್ತಾಗಿಯೇ ಪ್ರೇರಣೆ ದೊರೆಯಿತೆಂಬ ಅರ್ಥವನ್ನು ಗ್ರಹಿಸಬೇಕಗಿಲ್ಲ, ಕುಂದಕುಂದ ಸ್ವಾಮಿಯವರು ಪೂರ್ವ ಪರಂಪರಾಗತವಾಗಿ ತಮಗೆ ದೊರಕಿದ ಆಗಮದ ಆಧಾರದಿಂದ ತಮ್ಮ ಕೃತಿಗಳನ್ನು ರಚಿಸಿರುವರೆಂಬುದರಲ್ಲಿ ಸಂದೇಹವಿಲ್ಲ. ಈ ಆಗಮವನ್ನು ಎಂದರೆ ದ್ವಾದಶಾಂಗಶ್ರುತವನ್ನು ಪರಿಪೂರ್ಣವಾಗಿ ತಿಳಿದಿದ್ದ ಶ್ರುತಕೇವಲಿಗಳಲ್ಲಿ ಶ್ರು. ಕೇ. ಭದ್ರಬಾಹುಸ್ವಾಯವರು ಕೊನೆಯವರು. ಆದ್ದರಿಂದ ಅವರನ್ನು ಕುಂದಕುಂದಸ್ವಾಮಿಯವರು 'ಆಗಮಗುರು'ವೆಂದು ನಿರ್ದೇಶಿಸಿದ್ದಲ್ಲಿ ಅದು ಅರ್ಥವತ್ತಾಗಿಯೇ ಇದೆ. ಆದರೆ ಅವರು ಕುಂದಕುಂದ ಸ್ವಾಮಿಯವರ ಪ್ರತ್ಯಕ್ಷಗುರುವಾಗಿದ್ದರೆಂಬುದಕ್ಕೆ ಯುಕ್ತ ಆಧಾರಗಳಿಲ್ಲ ಶೋಧಾದರ್ಶಕ ಹಿಂದೆ ಉಲ್ಲೇಖಿಸಿರುವ ಪ್ರಬಂಧಕಾರರು 'ಶ್ರುತಕೇವಲಿಯವರು ಹೇಗೆ ಹೇಳಿರುವರೋ ಹಾಗೆಯೇ ನಾನು ಹೇಳಿದ್ದೇನೆ ಎಂದು ಕುಂದಕುಂದಸ್ವಾಮಿಯವರು ಅನೇಕಬಾರಿ ಹೇಳಿದ್ದಾರೆ' ಎಂಬುದನ್ನು ಆಧಾರವೆನಿಸಿ ಕಾಣಿಸಿದ್ದಾರೆ. ಆದರೆ ಕುಂದಕುಂದ ಸ್ವಾಮಿ ಯವರು ಅನೇಕ ಬಾರಿ 'ಜಿಣೇಕಹಿಯಂ, ಜಿಣೋವದಿಟ್ಠಂ, ಜಿಣೋವದೇಸೋಯಂ, ಣಿದ್ದಿಟ್ಠೋ ಅರಹಂತೇಹೀಂ, ಜಿಣವರೇಹಿಂ ಪಣ್ಣತ್ತಾ, ಸಮಣ ಮುಹುಗ್ಗದ ಮಟ್ಠಂ, ಭಣ್ಣಂತಿ ಸವ್ವಣ್ಹೂ, ಸಮಣಾ ಪರೂವಿಂತಿ, ಭಣ್ಣಂತಿ ತಚ್ಚಣ್ಹೂ, ಜಿಣಾವಮದಂ ಜಿಣವರೇಹಿಂ ಭಣಿದಂ,–ಪಣ್ಣತ್ತಂ ಸಮಣಾ ವಿಂತಿ,ಕೇವಲಿ–ಸುದಕೇವಲೀ ಭಣಿದಂ, ಗಣಧರ ದೇವೇಹೀಂ ಗಂಥಿಯಂ ಸಮ್ಮಂ' ಎಂದು ಹೇಳಿದ್ದಾರೆ. ಹೀಗೆ ಪದೇ ಪದೇ 'ಜಿನವರರಿಂದ ಉಪದಿಷ್ಟವದುದು ಎಂದು ಹೇಳಲಾಗಿರುವುದರಿಂದ ಕುಂದ ಕುಂದರು ಪ್ರತ್ಯಕ್ಷ ತೀರ್ಥಂಕರರ ಶಿಷ್ಯ ಎಂದು ಹೇಳುವುದು ಸುಸಂಗತವಾಗ ಬಲ್ಲುದೇ ? ನಿಶ್ಚಿತವಾಗಿ ಇಲ್ಲ. ಹೀಗೆಹೇ 'ಸುಯಕೇವಲೀ ಭಣಿಯಂ' ಎಂದು (ಸಮಯಸಾರದಲ್ಲಿ) ಹೇಳಿರುವಷ್ಟರ ಕಾರಣದಿಂದ ಇವರನ್ನು ಶ್ರುತಕೇವಲಿ ಭದ್ರ ಬಾಹುಸ್ವಾಮಿಯವರ ಪ್ರತ್ಯಕ್ಷ ಶಿಷ್ಯ ಎಂದು ಹೇಳುವುದೂ ಸಂಗತವೆನಿಸುವಿದಿಲ್ಲ. ಆದರೆ ಇದರ ವಿರುದ್ದವಾಗಿ ಕುಂದಕುಂದಸ್ವಾಮಿಯವರು ಷಟ್ ಖಂಡಾಗಮದ ರಚನೆಗೊಂಡ ಕಾಲದ ಅನಂತರ ಕಾಲದಲ್ಲಿ ಜೀವಿಸಿದ್ದರೆಂದು ಹೇಳಲು ಸಾಕಷ್ಟು ಆಧಾರಗಳಿವೆ. ಪರಂಪರಾಗತವಾದ ಹೇಳಿಕೆಯಂತೆ ವೀ. ನಿ. ಸಂ ೬೮೩ರ ಪರ್ಯಂತ ಆಗಮವು ಗುರು–ಶಿಷ್ಯಾನುಕ್ರಮದ ಸ್ಮೃತಿ ಪರಪಂರೆಯಲ್ಲಿ ಉಳಿದು

ಬಂದಿದ್ದು ಈ ಬಳಿಕ ಲಿಪಿಬದ್ಧವಾಗಿ ಪುಸ್ತಕಾರೂಢವಾಗಿದೆ. ಹೀಗೆ. ಪುಸ್ತಕಾರೂಢವಾದ ಆಗಮಕೃತಿ ಗಳಲ್ಲಿ ಷಟ್ಖಂಡಾಗಮವೇ ಮೊದಲನೆಯದಾಗಿದೆ. ಆದ್ದರಿಂದ ಕುಂದಕುಂದಾ ಚಾರ್ಯರ ಕೃತಿಗಳು ಷಟ್‌ಖಂಡಾಗಮದ ಅನಂತರ ಕಾಲೀನವಾದವುಗಳಾಗಿರ ಬೇಕೆಂದು ಸೂಚಿತವಾಗುವುದು. "ಸೂತ್ರ (ಆಗಮದಲ್ಲಿ)ಉತ್ತಮ ರೀತಿಯಿಂದ ಹೇಳಲಾಗಿರುವ, ಆಚಾರ್ಯ ಪರಂಪರೆಯ ಮಾರ್ಗದಿಂದ ಬಂದ (ಶಬ್ದ ಮತ್ತು ಅರ್ಥ ಪ್ರಕಾರದ) ಎರಡು ಪ್ರಕಾರದ ಸೂತ್ರವನ್ನು ತಿಳಿದು ಮೋಕ್ಷಮಾರ್ಗದಲ್ಲಿ ಚರಿಸು ವವನು ಭವ್ಯನು" ಎಂದು ಕುಂದಕುಂದಸ್ವಾಮಿಯವರು ಸೂತ್ರಪಾಹುಡದಲ್ಲಿ (ಗಾಹೆ೨) ಹೇಳಿದ್ದಾರೆ. ಇದರಿಂದ ಕುಂದಕುಂದಸ್ವಾಮಿಯವರು ಆಚಾರ್ಯಪರಂಪರೆ ಯಿಂದ ಬಂದ ಆಗಮದಾಧಾರದಿಂದ ತಮ್ಮ ಕೃತಿಗಳ ರಚನೆ ಮಾಡಿರುವರೆಂದು ಸೂಚಿತವಾಗುವುದು. ನಿಯಮಸಾರದಲ್ಲಿ ಆದಾನ ನಿಕ್ಷೇಪ ಸಮಿತಿ ವಿವರಣೆಯಲ್ಲಿ (ಗಾಹೆ ೬೪) 'ಪೊತ್ಥೈಇ ಕಮಂಡಲಾಇಂ' 'ಪುಸ್ತಕಕಮಂಡಲಾದಿಗಳನ್ನು' ಎಂದು ಹೇಳಿದೆ. ಇದರಿಂದ ಕುಂದಕುಂದಸ್ವಾಮಿಯವರ ಕಾಲದಲ್ಲಿ ಮುನಿಗಳು ಪುಸ್ತಕಗಳ ಉಪಯೋಗ ಮಡುತ್ತಿದ್ದರೆಂದು ಸ್ಪಷ್ಟವಾಗುವುದು. ಇದರಿಂದಲೂ ಕುಂದಕುಂದ ಸ್ವಾಮಿಯವರು, ಷಟ್ ಖಂಡಾಗಮವು ಪುಸ್ತಕಾರೂಢವಾಗಿ ಪುಸ್ತಕಗಳ ಬಳಕೆ ಮುನಿ ಗಳಲ್ಲಿ ಪ್ರಚಲಿತವಾದ ಅನಂತರ ಕಾಲದಲ್ಲಿದ್ದರೆಂದು ಸ್ಪಷ್ಟವಾಗಿ ಸೂಚಿತವಾಗು ವುದು.ಇದಲ್ಲದೆ ಕುಂದಕುಂದಸ್ವಾಮಿಯವರು, ನಿರ್ಗ್ರಂಥ ಮುನಿ ಸಂಘವು ದಿಗಂಬರ ಮತ್ತು ಶ್ವೇತಾಂಬರ ಎಂಬ ಎರಡು ಪಂಗಡಗಳಾಗಿ ಏರ್ಪಟ್ಟಕಾಲದ ಅನಂತರದವರಾಗಿರುವರೆಂಬುದಕ್ಕೆ ಅವರ ಕೃತಿಗಳಲ್ಲಿ ಸ್ಪಷ್ಟ ಆಧಾರಗಳು ದೊರೆಯು ತ್ತವೆ. ನಿರ್ಗ್ರಂಥ ಮುನಿಗಳು ವಸ್ತ್ರಧಾರಕರಾಗಿದ್ದೂ ಮುಕ್ತಿ ಪಡೆಯಬಹುದು. ಸ್ತ್ರೀಯರು ತದ್ಭವದಲ್ಲಿಯೇ ಮುಕ್ತಿ ಹೊಂದಬಹುದು. ಕೇವಲಿಗಳು ಕಬಲಾಹಾರ ತೆಗೆದುಕೊಳ್ಳುವರು ಎಂಬವು ಶ್ವೇತಾಂಬರ ಆಮ್ನಾಯದಲ್ಲಿ ಅಂಗೀಕೃತವಿರುವ ಮುಖ್ಯವಾದ ಮೂರು ಅಂಶಗಳು ದಿಗಂಬರ ಆಮ್ನಾಯಕ್ಕೆ ವಿರುದ್ಧವಾಗಿವೆ. ಕುಂದ ಕುಂದರು ಇವುಗಳನ್ನು ನಿರಾಕರಿಸಿದ್ದಾರೆ. ಈ ಪಂಗಡಗಳ ಉತ್ಪತ್ತಿಗೆ ಶ್ರು. ಕೇ. ಭದ್ರಬಾಹುಸ್ವಾಮಿಯವರ ಅನಂತರದಲ್ಲಿ ಸ್ಥೂಲಭದ್ರಸ್ವಾಮಿಯವರ ಕಾಲದಲ್ಲಿ ಅಂಕುರಾರ್ಪಣವಾಗಿರುವುದಾದರೂ, ಆವಾಗಲೇ ದಿಗಂಬರ ಮತ್ತು ಶ್ವೇತಾಂಬರ ಎಂಬ ಹೆಸರಿನಿಂದ ಪಂಥ ಭೇದಗಳು ಮೂಡಿದರೆ ನಿರ್ಗ್ರಂಥ ಪಂಥದಲ್ಲಿ

ಮೊದಲಿಗೆ ಅರ್ಧಗಪ್ಪಡಿಗ (ನಗ್ನತೆಯನ್ನು ಮರೆಮಾಡಿಕೊಳ್ಳು ವುದಕ್ಕಾಗಿ ಎಡಗೈಯಲ್ಲಿ ತುಂಡು ಬಟ್ಟೆಯನ್ನು ಹಿಡಿದುಕೊಳ್ಳುವ ರೂಡಿಯ) ಪಂಥವು ಹುಟ್ಟಿ ಮುಂದೆ ಆ ಪಂಥವೇ ಶ್ವೇತಂಬರ ಪಂಥವಾಗಿ ಪರಿವರ್ತಿತವಾಯಿತೆಂಬ ಐತಿಹ್ಯವಿದೆ. ಈ ಶ್ವೇತಾಂಬರ ಪಂಥವೂ ವಿಕ್ರಮ (ಮರಣ) ಸಂವತ್ ೧೩೬ರಲ್ಲಿ (ವೀ. ನಿ. ಸಂ. ೬೦೬ರಲ್ಲಿ ಹುಟ್ಟಿತೆಂದು ದಿಂಗಬರ ಪಂಥದ ಐತಿಹ್ಯವಿದೆಯಾದರೆ ದಿಗಂಬರ ಪಂಥವು ವಿ.ಸಂ.. ೧೩೯ರಲ್ಲಿ (ವೀ. ನಿ. ಸಂ. ೬೦೯ರಲ್ಲಿ ಹುಟ್ಟಿತೆಂಬ ಶ್ವೇತಾಂಬರ ಪಂಥದ ಐತಿಹ್ಯ ವಿದೆ.[೧೮] ಇಲ್ಲಿ ಕಾಣಿಸಿರುವ ಎರಡೂ ಪಂಥಗಳ ಹೇಳಿಕೆಯಲ್ಲಿ ಹೆಚ್ಚಿನದಾದ ಅಂತರ ವಿಲ್ಲದಿರುವುದರಿಂದ ಪ್ರಸ್ತುತ ಐತಿಹ್ಯವು ವಿಶ್ವಾಸಾರ್ಹವಾಗಿದೆಯೆಂದು ಗಣನೆ ಮಾಡ ಬಹುದಾಗಿದೆ. ಇದಲ್ಲದೆ ಮತ್ತೂ ಒಂದು ಆಧಾರದಿಂದ ಈ ಐತಿಹ್ಯವು ಪುಷ್ಟೀಕೃತ ವಾಗುವುದು.

ನಂದಿ ಆಮ್ನಾಯ–ಸರಸ್ವತೀಗಚ್ಛ ಪಟ್ಟಾವಲಿ 'ಇ'ಯಲ್ಲಿರುವ ಐತಿಹ್ಯ[೧೯] ಪ್ರಸ್ತುತ ಪ್ರಸಂಗದಲ್ಲಿ ಗಮನಾರ್ಹವೂ ಗಣನಾರ್ಹವೂ ಆಗಿದೆ. ಆದರೆ ಪಟ್ಟಾವಲಿಗಳು ಇತ್ತೀಚಿನ ಕಾಲದವುಗಳಾಗಿರುವುದರಿಂದ ಅವುಗಳಲ್ಲಿ ಹೇಳಿರುವ ಇತಿವೃತ್ತದ ಬಗ್ಗೆ ಕೆಲವರು ವಿದ್ವಾಂಸರು ಅವಿಶ್ವಾಸ ವ್ಯಕ್ತಪಡಿಸಿದ್ದಾರೆ.[೧೯] ಹಿಂದೆ ವಿವರಿಸಿರುವಂತೆ, ಈ ಪಟ್ಟಾವಲಿಗಳು ಸರ್ವಥಾ ದೋಷ ಮುಕ್ತವಲ್ಲದಿದ್ದರೂ ಪೂರ್ವಪರಂಪರಾಗತ ಕೃತಿಗಳ ಆಧಾರದಿಂದ ರಚಿತವಾಗಿರುವುದರಿಂದ ಮತ್ತು ಇವುಗಳಲ್ಲಿ ಹೇಳಲಾಗಿರುವವಿಷಯಗಳು ಇತರ ಪೂರ್ವಕಾಲೀನ ಶಾಸನಗಳು ಮತ್ತು ಕೃತಿಗಳಿಂದ ಸಾಕ್ಷೀಕರಿಸಲ್ಪ ಡುವುವಾದ್ದರಿಂದ ವಿಶ್ವಾಸಾರ್ಹವಾಗಿವೆ. ಈ ಆಧಾರಗಳ ಪರಿವೀಕ್ಷಣೆಯೊಡನೆ ಹಿಂದೆ ಕೊಡಲಾಗಿರುವ ಶ್ರುತಧರ ಆಚಾರ್ಯಾನುಕ್ರಮದ ಸಂತತಿಯಲ್ಲಿ ಕೊನೆಯವರಾದ ಲೋಹಾಚಾರ್ಯರಿಂದ ಹಿಂದಿನ ಎಂದರೆ ಉಪಾಂತ್ಯ ಆಚಾರ್ಯರು ಆಚಾರಾಂಗ ಶ್ರುತಧರರಾದ (ತೃ) ಭದ್ರಬಾಹುಸ್ವಾಮಿ ಎಂಬ ಹೆಸರಿನವರಾಗಿರುವರೆಂಬುದನ್ನು ಇಲ್ಲಿ ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಈ ಭದ್ರಬಾಹುಸ್ವಾಮಿಯವರು ವೀ. ನಿ. ಸಂ. ೬೧೦–೬೧೧ರಿಂದ ೬೩೩ರವರೆಗೆ ಆಚಾರ್ಯ ಪಟ್ಟಧರರಾಗಿದ್ದರು ಮತ್ತು ಇವರ ಕಾಲದಲ್ಲಿ ಶ್ವೇತಾಂಬರರು ಮೂಲ ಸಂಘದಿಂದ ಬೇರ್ಪಟ್ಟು ತಮ್ಮ ಸ್ವಂತತ್ರ ಸಂಘವನ್ನು ಸ್ಥಾಪಿಸಿಕೊಂಡರೆಂದು ಹೇಳಿದೆ.[೨೦] ಈರೀತಿಯಿಂದ ದಿಂಗಬರ ಮತ್ತು ಶ್ವೇತಾಂಬರ ಎಂಬ ಹೆಸರುಗಳಿಂದ ಈ ಪಂಥಗಳು ವೀ. ನಿ.

ಸಂ. ೬೧೦ ಮತ್ತು ೬೩೩ರ ಮಧ್ಯವರ್ತಿಕಾಲದಲ್ಲಿ ಸ್ವತಂತ್ರವಾಗಿ ಅಸ್ತಿತ್ವಕ್ಕೆ ಬಂದಿವೆಯೆಂದು ಸ್ಫುಟವಾಗುವುದು ಆದ್ದರಿಂದ ಕುಂದಕುಂದಾಚಾರ್ಯರು ಈ ಶ್ವೇತಾಂಬರ ಪಂಥದಲ್ಲಿ ಮಾನ್ಯತೆ ಹೊಂದಿದ್ದ, ದಿಗಂಬರ ಪಂಥಕ್ಕೆ ವಿರುದ್ಧ್ವಾದ ಕೆಲವು ವಿಷಯಗಳನ್ನು ಕುರಿತು ಹಿಂದೆ ಹೇಳಿರುವಂತೆ, ವಿಚಾರ ಮಂಡನೆ ಮಾಡಿದ್ದಾರೆಂದು ನಿಶ್ಚಿತವಾಗುವುದು.

ನಂದಿ ಆಮ್ನಾಯ (ಎ) ಪಟ್ಟವಲಿಯಲ್ಲಿ[೨೧] ಕೊಡಲಾಗಿರುವ ವಿವರಣೆಯಂತೆ ಕುಂದಕುಂದ ಸ್ವಾಮಿಯವರು, ತಮ್ಮ ೧೧ನೇ ವಯಸ್ಸಿನಲ್ಲಿ ಮುನಿದೀಕ್ಷೆ ಪಡೆದು ೩೩ ವರ್ಷ ಕಾಲ ಸಾಮಾನ್ಯ ಮುನಿಯಾಗಿದ್ದು ಸಂ. ೪೯ರಲ್ಲಿ ಆಚಾರ್ಯಪಟ್ಟಧರರಾಗಿ ೫೧ವ. ೧೦. ತಿಂ. ೧೦ ದಿವಸಗಳ ಕಾಲ ಆಚಾರ್ಯಪಟ್ಟಸ್ಥರಾಗಿದ್ದು ೫ ದಿನಗಳ ವಿರಹದ ಬಳಿಕ ತಮ್ಮ ೯೫ವ. ೧೦ತಿಂ. ೧೫ ದಿನಗಳ ವಯಸ್ಸಿನಲ್ಲಿ ಸಂ. ೧೦೧ರಲ್ಲಿ ದಿವಂಗತರಾದರೆಂದು ಹೇಳಿದೆ. ಪಟ್ಟಾವಲಿ 'ಸಿ' ಯಲ್ಲಿ ಕುಂದಕುಂದರ ಆಚಾರ್ಯ ಪಟ್ಟಕಾಲ ೪೧ವ. ೧೦ತಿಂ, ೧೦ದಿನಗಳಾಗಿದ್ದು ಒಟ್ಟು ಆಯುಷ್ಯ ೮೫ ವ. ೧೦ತಿಂ, ೧೫ ದಿನಗಳೆಂದು ಹೇಳಿದೆ[೨೩] ಇಲ್ಲಿ ಸಂವತ್‌ಅನ್ನು ಶಾಲಿವಾಹನ ಶಕ ಸಂವತ್ಸನ್ನಾಗಿ ಪರಿಗಣನೆ ಮಾಡಬೇಕಾಗಿದೆ.[೨೨] ಶಾ. ಶಕೆಯು ವೀ. ನಿ. ಸಂ. ೬೦೬ರಲ್ಲಿ ಪ್ರಾರಂಭವಾಗಿ ದೆಯೆಂಬ ಪರಂಪರಾಗತ ಐತಿಹ್ಯವಿದೆ. ಇದರಂತೆ ಕುಂದಕುಂದಾಚಾರ್ಯರು ವೀ. ನಿ. ಸಂ(೬೦೬+೧೦೧ =) ೭೦೭ರಲ್ಲಿ ದಿವಂಗತರಾಗಿರುವರೆಂದು ಗಣನೆಯಾಗುವುದು. ಇವರ ಆಯುಷ್ಯವನ್ನು ಪಟ್ಟಾವಲಿಯಲ್ಲಿ ಕಂಡುಬರುವಂತೆ ಕನಿಷ್ಠ ಮಿತಿಯಿಂದ ೮೬ ವರ್ಷಗಳೆಂದು ಪರಿಗಣನೆ ಮಾಡಿದರೂ ಇವರು ವೀ. ನಿ. ಸಂ.(೭೦೭_೮೬=) ೬೨೧ರಲ್ಲಿ ಜನಿಸಿರುವರೆಂದೂ ಮತ್ತು ಇವರು ತಮ್ಮ ೧೧ನೇ ವಯಸ್ಸಿನಲ್ಲಿ ಮುನಿದೀಕ್ಷೆ ಹೊಂದಿರುವರೆಂಬ ಗಣನೆಯಂತೆ ವೀ. ನಿ. ಸಂ. (೬೨೧+೧೧=)೬೨೩ರಲ್ಲಿ ಮುನಿಯಾಗಿ ದೀಕ್ಷಿತರಾಗಿರುವರೆಂದು ಗಣನೆ ಹೊದುವುದು.. ಹೀಗಲ್ಲದೆ ಪಟ್ಟಾವಲಿ ಯಲ್ಲಿಯೇ ಹೇಳಿರುವಂತೆ ಇವರ ಆಯುಷ್ಯವನ್ನು ೯೬ ವರ್ಷಗಳೆಂದು ಗಣನೆ ಮಾಡಿದಲ್ಲಿ ಇವರು ವೀ. ನಿ. ಸಂ. ೬೨೨ರಲ್ಲಿ ದೀಕ್ಷಿತರಾಗಿರಲಿ ಅಥವಾ ೬೨೩ರಲ್ಲಿಯೇ ದೀಕ್ಷಿತರಾಗಿರಲಿ, ಇವರ ಈ ದೀಕ್ಷೆಯ ಕಾಲದಲ್ಲಿ ಉಪಾಂತ್ಯ ಆಚಾರಾಂಗ ಶ್ರುತಧರ (ತೃ) ಭದ್ರಬಾಹುಸ್ವಾಮಿಯವರು ನಿರ್ಗ್ರಂಥ ಮೂಲಸಂಘದ ಆಚಾರ್ಯ ಪದಸ್ಥರಾಗಿದ್ದರೆಂಬುದು ನಿಶ್ಚಿತವಿದೆ. ಹಿಂದೆ ಕುಂದಕುಂದಾಚಾರ್ಯರ ಬೋಧಪಾಹುಡದ ಎರಡು

ಗಾಹೆಗಳನ್ನು ಉಲ್ಲೇಖಿಸಿ ಅವುಗಳಲ್ಲಿ ಎರಡನೆಯದಾದ (೬೨ನೇ)ಗಾಹೆಗಳಲ್ಲಿ ದ್ವಾದಶಾಂಗ ಚತುರ್ದಶಪೂರ್ವಿ ಶ್ರುತಕೇವಲಿ ಭದ್ರಬಾಹು ಸ್ವಾಮಿಯವರನ್ನು ಕುಂದಕುಂದಾಚಾರ್ಯರು ತಮ್ಮ 'ಗಮಯಗುರು'(ಪಂರಪರೆಯ ಗುರು) ಎಂದು ನಿರ್ದೇಶಿಸಿರುವರು ಎಂದು ಸ್ಪಷ್ಟಪಡಿಸಿದೆ. ಈಗ ಈ ಹೇಳಿದ ಎರಡು ಗಾಹೆಗಳಲ್ಲಿ ಮೊದಲನೆಯ (೬೧ನೇ) ಗಾಹೆಯಲ್ಲಿ 'ಸೀಸೇಣ ಯ ಭದ್ದಬಾಹುಸ್ಸ'ಎಂಬ ಉಕ್ತಿಯ ಮೂಲಕ ಕುಂದಕುಂದಾಚಾರ್ಯರು ತಮ್ಮನ್ನು 'ಭದ್ರಬಾಹು'ವಿನ ಶಿಷ್ಯ ಎಂದು ನಿರ್ದೇಶಿಸಿಕೊಂಡಿದ್ದಾರಾಗಿ ಇವರು ಉಪಾಂತ್ಯ ಆಚಾರಾಂಗ ಶ್ರುತಧರ (ತೃ) ಭದ್ರಬಾಹುಸ್ವಾಮಿಯವರು ಆಚಾರ್ಯಪಸ್ಥರಾಗಿದ್ದ ಕಾಲದಲ್ಲಿಯೇ ಮುನಿದೀಕ್ಷೆ ಹೊಂದಿರುವರೆಂದು ಈ ಹಿಂದೆ ಸ್ಪಷ್ಟಪಡಿಸಲಾಗಿದೆ. ಆದ್ದರಿಂದ ಈ (೬೧ನೇ) ಗಾಹೆಯಲ್ಲಿ ಹೆಸರಿಸಲಗಿರುವ ಭದ್ರಬಾಹುಸ್ವಾಮಿಯವರು ಮತ್ಯಾರೂ ಆಗಿರದೆ ಉಪಾಂತ್ಯ ಆಚಾರಾಂಗ ಶ್ರತಧರ (ತೃ) ಭದ್ರಬಾಹುಸ್ವಾಮಿಯವರೇ ಆಗಿರುವರೆಂದೂ ಮತ್ತು ಇಅವರಿಂದ ಮುನಿದೀಕ್ಷೆ ಪಡೆದ ಕಾರಣದಿಂದ ಇವರು ಕುಂದಕ್ಲುಂದಾಚಾರ್ಯರಿಗೆ ದೀಕ್ಷಾಗುರುವಾಗಿದ್ದಾರೆ ಮತ್ತು ಈ ಕಾರಣದಿಂದ ಕುಂದಕುಂದಾಚಾರ್ಯರು ತಮ್ಮನ್ನು 'ಭದ್ರಬಾಹುವಿನ ಶಿಷ್ಯ' ಎಂದು ನಿರ್ದೇಶಿಸಿಕೊಂಡಿರುವರೆಂಬುದು ತರ್ಕ ಬದ್ದವಾಗಿ ನಿಶ್ಚಿತವಾಗುವುದು. ಈ ಪರ್ಯಾಲೋಚನೆಯಂತೆ ಕುಂದಕುಂದಾ ಚಾರ್ಯರು ವೀ. ನಿ. ಸಂ. ೬೧೦ (ಕ್ರಿ. ಶ. ೮೩)ಅಥವಾ ವೀ. ನಿ. ಸಂ. ೬೨೦ (ಕ್ರಿ. ಶ೯೩) ಮತ್ತು ವೀ. ನಿ. ಸಂ. ೭೦೭(ಕ್ರಿ. ಶ. ೧೮೦)ರ ಮಧ್ಯ ಕಾಲದಲ್ಲಿ ಜೀವಿಸಿದ್ದರೆಂದು ಗಣನೆಯಾಗುವುದು.

ಕೆಲವರು ಗಣ್ಯವಿದ್ವಾಂಸರು ಕುಂದಕುಂದಾಚಾರ್ಯರು ಕ್ರಿ. ಶ. ಎಂಟನೇ ಶತಮಾನದ ಅನಂತರಕಾಲದವರು ಎಂದು ವಾದಿಸುತ್ತಾರೆ.[೨೪] ಆದರೆ ಕನಿಷ್ಠ ಮಿತಿಯಿಂದ ಕ್ರಿ. ಶ. ೬ನೇ ಶತಮಾನ ಕಾಲದವರಾದ ಪೂಜ್ಯಪಾದ (ದೇವನಂದಿ) ಆಚಾರ್ಯರು ತಮ್ಮ ಸರ್ವಾರ್ಥಸಿದ್ಧಿ (ತ. ಸೂ.) ಟೀಕೆಯಲ್ಲಿ ತಾವು ಹೇಳುವ ಅರ್ಥದ ಸಮರ್ಥನೆ ಗಾಗಿ ಕುಂದಾಕುಂದಾಚಾರ್ಯರ ಬಾರಸ ಅಣುವೆಕ್ಖದ ಐದು ಗಾಹೆಗಳು, ಪಂಚಾಸ್ತಿ ಕಾಯದ ಎರಡು ಗಾಹೆಗಳು, ನಿಯಮ ಸಾರದ ಗಾಹೆ

ಮತ್ತು ಪ್ರವಚನಸಾರದ ಮೂರು ಗಾಹೆಗಳನ್ನು ಉಲ್ಲೇಖ ಮಾಡಿದ್ದಾರೆ[೨೫]. ಇದರಿಂದ ಕುಂದಕುಂದಾಚಾರ್ಯರು ಪೂಜ್ಯಪಾದರಿಗಿಂತ (ಕನಿಷ್ಠ ಮಿತಿಯಿಂದ ಕ್ರಿ. ಶ. ೬ನೇ ಶತಮಾನಕ್ಕಿಂತ) ಹಿಂದಿನಕಾಲದವರೆಂದು ನಿಸ್ಸಂದೇಹ ರಿತಿಯಿಂದ ನಿಶ್ಚಿತವಾಗುವುದು. ಆದ್ದರಿಂದ ಕುಂದಕುಂದಾಚಾರ್ಯರು ಕ್ರಿ. ಶ. ೮ನೇ ಶತಮಾನದಿಂದೀಚಿನವರು ಎಂದು ಹೇಳುವುದು ಸರ್ವಥಾ ಅಸಂಗತವಾಗಿದೆ.

ಕುಂದಕುಂದಾಚಾರ್ಯರ ಜೀವಿತಕಾಲದ ಬಗ್ಗೆ ಹಿಂದೆ ಕೊಡಲಾಗಿರುವ ನಿರ್ಣಯ ವನ್ನು ಸಮರ್ಥಿಸುವ ಮತ್ತೂ ಒಂದು ಅಂಶವನ್ನು ಇಲ್ಲಿ ಪ್ರಸ್ತಾವಿಸಬೇಕಾಗಿದೆ. ಪಂಡಿತ್ ಸುಖಲಾಲ್ ಜೀ ಸಂಘವಿಯವರು ಸಭಾಷ್ಯ ತತ್ವಾರ್ಥ ಸೂತ್ರ ರಚನಕಾರ ರಾದ ವಾಚಕ ಉಮಾಸ್ವಾತಿಯವರ ಜೀವಿತಕಾಲವು ಗರಿಷ್ಠಮಿತಿಯಿಂದ ವಿಕ್ರಮ ಶಕೆ ಪ್ರಥಮ ಶತಾಬ್ದಿ ಮತ್ತು ಕನಿಷ್ಠಮಿತಿಯಿಂದ ಮೂರು–ನಾಲ್ಕನೇ ಶತಮಾನವಾಗುವು ದೆಂದು ಹೇಳಿ ಈ ಮೂರು ಅಥವಾ ನಾಲ್ಕುನೂರು ವರ್ಷಗಳ ಮಧ್ಯೆ ನಿಶ್ಚಿತ ಸಮಯದ ಶೋಧನೆಗಾಗಿ ಕೆಲವು ಅಂಶಗಳನ್ನು ಕಾಣಿಸಿದ್ದಾರೆ.[೨೬] ಇವುಗಳಲ್ಲಿ ಒಂದು ಮುಂದಿನಂತಿದೆ. "ಹಿಂದೆ ಕೊಡಲಾಗಿರುವ, ದ್ರವ್ಯ, ಗುಣ ಹಾಗೂ ಕಾಲಗಳ ಲಕ್ಷಣ ನಿರೂಪಿಸುವ ತತ್ವಾರ್ಥಸೂತ್ರದ (ಗುಣಪರ್ಯಾಯವದ್ದ್ರವ್ಯಂ–೫/೩೭, ದ್ರವ್ಯಾ ಶ್ರಯಾ ನಿರ್ಗುಣಾಗುಣಾ–೫/೪೦ ಮತ್ತು ವರ್ತನಾಪರಿಣಾಮಃ, ಕ್ರಿಯಾ ಪರತ್ವಾ ಪರತ್ವೇ ಚ ಕಾಲಸ್ಯ–೫/೨೨ ಈ) ಮೂರು ಸೂತ್ರಗಳ ಸಂಬಂಧವಾಗಿ ಉತ್ತರಾಧ್ಯಯನದ ಹೊರತಾಗಿ ಮತ್ತಾವ ಪ್ರಾಚೀನ ಶ್ವೇತಾಂಬರ ಜೈನ ಆಗಮ ಎಂದರೆ, ಅಂಗ (ಶ್ರುತ)ದ ಶಾಬ್ದಿಕ ಆಧಾರವು ಉತ್ತರಾಧ್ಯನದಷ್ಟೇ ಪ್ರಮಾಣದಿಂದ ಇದುವರೆಗೆ ಕಂಡುಬಂದಿಲ್ಲ, ಆದರೆ ವಿಕ್ರಮ ಶಕೆ ಒಂದೆನೇ–ಎರಡನೇ ಶತಾಬ್ದಿಯವರೆಂದು ತಿಳಿಯಲಾಗಿರುವ ಕುಂದಕುಂದರ ಪ್ರಾಕೃತವಚನಗಳೊಡನೆ ತತ್ವಾರ್ಥ ಸೂತ್ರದ ಸಂಸ್ಕೃತ ಸೂತ್ರಗಳ ಸದೃಶತೆಯು ಕೆಲವೆಡೆ ಪೂರ್ಣ ರೀತಿಯಾಗಿ ಮತ್ತೆ ಬೇರೆಡೆ ಬಹುಕಡಿಮೆಯಾದುದದ್ದಾಗಿ ಇದೆ. ಶ್ವೇತಾಂಬರ ತತ್ವಾರ್ಥ ಸೂತ್ರ ಪಾಠದಲ್ಲಿ ದ್ರವ್ಯದ ಲಕ್ಷಣ ಹೇಳುವ "ಉತ್ಪಾದವ್ಯಯಧ್ರೌವ್ಯಯುಕ್ತಂಸತ್–೫/೨೯ ಮತ್ತು ಗುಣ ಪರ್ಯಾಯವದ್ ದ್ರವ್ಯಂ–೫/೩೭' ಎಂಬ ಎರಡು ಸೂತ್ರಗಳು ಮಾತ್ರ ಇವೆ. ಈ ಎರಡು ಸೂತ್ರಗಳಲ್ಲದೆ, ಮೂರನೆಯದಾಗಿ 'ಸದ್

ದ್ರವ್ಯಲಕ್ಷಣಂ' ೫/೨೯ ಎಂಬ ಸೂತ್ರವು ದಿಗಂಬರ ಸೂತ್ರಪಾಠದಲ್ಲಿದೆ. ಈ ಮೂರು ದಿಗಂಬರ ಸೂತ್ರಪಾಠದ ಸೂತ್ರಗಳು ಕುಂದಕುಂದರ ಪಂಚಾಸ್ತಿಕಾಯದ ಕೆಳಗೆ ಕಾಣಿಸಿರುವ ಗಾಥೆಯಲ್ಲಿ ಪೂರ್ಣರೂಪದಿಂದ ಇವೆ.

ದವ್ವಂ ಸಲ್ಲಕ್ಖಣಿಯಂ ಉಪ್ಪಾದವ್ವಯಸಂಜುತ್ತಂ ।

ಗುಣಪಜ್ಜಯಾಸಯಂ ವಾ ಜಂ ತಂ ಭಣ್ಣಂತಿ ಸವ್ವಣ್ಹೂ ॥

ಇದಲ್ಲದೆ ಕುಂದಕುಂದರ ಪ್ರಸಿದ್ಧ ಗ್ರಂಥಗಳೊಡನೆ ತತ್ವಾರ್ಥ ಸೂತ್ರದ ಯಾವ ಶಾಬ್ದಿಕ ಹಾಗೂ ವಸ್ತುಗತವಾದ ಮಹತ್ವಪೂರ್ಣ ಸಾದೃಶ್ಯವಿದೆಯೋ ಅದು ಆಕಸ್ಮಿಕ ವಾದುದೇನಲ್ಲ."

ಮಾನ್ಯ ಪಂ. ಸುಖಲಾಲ್ ಜೀ ಸಂಘವೀ ಅವರು ತತ್ವಾರ್ಥ ಸೂತ್ರದ ದ್ರವ್ಯ ಲಕ್ಷಣ ನಿರೂಪಕ (ಗುಣಪರ್ಯಾಯಯವದ್ ದ್ರವ್ಯಂ) ಸೂತ್ರದೊಡನೆ ಉತ್ತರಾಧ್ಯಯ ನದ 'ಗುಣಾಣಮಾಸಓ ದವ್ವಂ' ಎಂಬುದು ಸದೃಶತೆ ಹೊಂದಿದೆ ಎಂದು ಹೇಳಿರುವ ರಾದರೂ ಇದು ಪೂರ್ಣರೂಪದ ಸದೃಶತೆಯಲ್ಲವೆಂಬುದು ಸ್ಪಷ್ಟವಿದೆ. ಹೀಗೆಯೇ ಉತ್ತರಾಧ್ಯನದ 'ಏಗದವ್ವಸ್ಸಿಯಾ ಗುಣಾ' ಮತ್ತು 'ವತ್ತಣಾಲಕ್ಖಣೋ ಕಾಲೋ' ಎಂಬ ವಾಕ್ಯಗಳು ಅನುಕ್ರಮವಾಗಿ ತತ್ವಾರ್ಥ ಸೂತ್ರದ 'ದ್ರವ್ಯಾಶ್ರಯಾ ನಿರ್ಗುಣಾ ಗುಣಾಃ' ಮತ್ತು ವರ್ತನಾಪರಿಣಾಮಃ, 'ಕ್ರಿಯಾಪರತ್ವಾಪರತ್ವೇ ಚ' ಎಂಬ ಸೂತ್ರ ಗಳೊಡನೆ ಆಂಶಿಕ ಸಾದೃಶ್ಯತೆ ಹೊಂದಿವೆಯಷ್ಟಲ್ಲದೆ ಪೂರ್ಣರೂಪದ ಸಾದೃಶ್ಯತೆ ಯಲ್ಲವೆಂಬುದು ಸ್ಪಷ್ಟವಿದೆ. ಇದಲ್ಲದೆ ಮತ್ತಾವ ಅಂಗ (ಶ್ರುತ) ಗ್ರಂಥದಲ್ಲಿಯೂ ಸಾದೃಶ್ಯತೆ ಕಂಡುಬರುವುದಿಲ್ಲವೆಂಬುದು, ಪ್ರಸಂಗ ವಶವಾಗಿ, ಗಮನಾರ್ಹ ಅಂಶವಾಗಿದೆ. ಇದಲ್ಲದೆ, ಇಲ್ಲಿ ಕುಂದಕುಂದರ ಗ್ರಂಥಗಳಲ್ಲಿ ಕಂಡು ಬರುವ ಸಾದೃಶ್ಯತೆಗಳ ಬಗ್ಗೆ ಹೇಳಿರುವ ಮಾತು ಮನನೀಯವಾಗಿದೆ. ಮಾನ್ಯ ಪಂ. ಸುಖಲಾಲ್ ಸಂಘವೀ ಅವರು ಕುಂದಕುಂದಾಚಾರ್ಯರ ಪಂಚಾಸ್ತಿಕಾಯದ ಒಂದು ಗಾಹೆಯಲ್ಲಿ ಮಾತ್ರ ಇರುವ ಮೂರು ವಾಕ್ಯ ಭಾಗಗಳೊಡನೆ ತತ್ವಾರ್ಥ ಸೂತ್ರದ ಮೂರು ಸೂತ್ರಗಳು ಹೊಂದಿರುವ ಪೂರ್ಣ ರೀತಿಯದಾದ ಸಾದೃಶ್ಯತೆಯನ್ನು ಕಾಣಿಸಿದ್ದಾರೆ. ಆದರೆ ಇದೇ ರೀತಿ ಕುಂದಕುಂದಾಚಾರ್ಯರ ಗ್ರಂಥಗಳ ಅನೇಕ ಗಾಹೆಗಳು ಹಾಗೂ ಗಾಹೆಗಳ ವಾಕ್ಯ ಭಾಗಗಳು ಮತ್ತು ತತ್ವಾರ್ಥ ಸೂತ್ರದ ಅನೇಕಾನೇಕ ಸೂತ್ರಗಳ ಮಧ್ಯೆ ಹೆಪ್ಪು

ಹೆಪ್ಪಾಗಿ ಪೂರ್ಣ ರೀತಿಯದಾದ ಶಬ್ದಶಃ ಪ್ರತಿಚ್ಛಾಯೆ ಇಲ್ಲವೆ, ಭಾಗಶಃ ಪ್ರತಿಚ್ಛಾಯೆ ಮತ್ತು ಪೂರ್ಣ ರೀತಿಯಿಂದ ಅರ್ಥಸಂಗತ ಸದೃಶತೆಯನ್ನು ಕಾಣಬಹುದು. ಉದಾ ಹರಣಾರ್ಥವಾಗಿ ಇಲ್ಲಿ ತತ್ತ್ವಾರ್ಥ ಸೂತ್ರದ ಸೂತ್ರಗಳನ್ನು ಮತ್ತು ಕುಂದಕುಂದರ ಕೃತಿಗಳ ಒಂದೆರಡು ಗಾಹೆಗಳನ್ನು ಹಾಗೂ ವಾಕ್ಯ ಭಾಗಗಳನ್ನು ಉಲ್ಲೇಖಿಸಲಾಗಿದೆ.

೧.ಉಪಯೋಗೋಲಕ್ಷಣಂ–ತ. ಸೂ ೨/೮

ಉವವೋಗ ಲಕ್ಖಣಾ–ಪಂಚಾಸ್ತಿಕಾಯಸಂಗ್ರಹ ೧೦೯

ಉವವೋಗಮಓ ಜೀವೋ–ಪ್ರವಚನಸಾರ–೨/೮೩

೨.ದೇವಾಶ್ಚತುರ್ನಿಕಾಯಾಃ–ತ. ಸೂ. ೪/೧

ದೇವಾಚೌಣ್ಣಿ ಕಾಯಾ–ಪಂ.ಕಾ. ಸಂ. ೧೧೮

೩. ಸಂಯಗ್ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗಃ–ತ. ಸೂ. ೧/೧

ಸಮ್ಮತ್ತಣಾಣಜುತ್ತಂ ಚಾರಿತ್ತಂ. . .

ಮೊಕ್ಖಸ್ಸಹವದಿ ಮಗ್ಗೋ. . . । ಪಂ. ಕಾ. ಸಂ. ೧೦೬

೪.ತತ್ತ್ವಾರ್ಥಶ್ರದ್ಧಾನಂ ಸಮ್ಯಗ್ದರ್ಶನಂ–ತ ಸೂ. ೧/೨

ಜೀವಾದೀಸದ್ದ ಹಣಂ ಸಮ್ಮತ್ತಂ–(ಅಷ್ಟಪಾಹುಡದ)ದರ್ಶನಪಾಹುಡ – ೨೦

ಸಮ್ಮತ್ತಂ ಸದ್ದ ಹಣಂ ಭಾವಾಣಂ–ಪಂ. ಕಾ. ಸಂ –೧೦೭

ಪ್ರಾಯಿಕವಾಗಿ, ತತ್ತ್ವಾರ್ಥ ಸೂತ್ರದ ಎಲ್ಲ ಸೂತ್ರಗಳಲ್ಲವಾದರೂ ಅತ್ಯಧಿಕಾಧಿಕ ಸೂತ್ರಗಳ ಪೂರ್ಣರೀತಿಯದಾದ, ಇಲ್ಲವೆ ಭಗಶಃ ಇಲ್ಲವೆ ಆಶಿಂಕರೀತಿಯದಾದ ಶಾಬ್ದಿಕ ಸದೃಶತೆ ಮತ್ತು ಅರ್ಥದಿಂದ ಪೂರ್ಣರೀತಿಯದಾದ ಸದೃಶತೆಯನ್ನು ಕಾಣ ಬಹುದು.[೨೭]

ಪ್ರಸ್ತುತ ಪ್ರಸಂಗದಲ್ಲಿ ಒಂದು ಸಂಗತಿಯ ಪರ್ಯಾಲೋಚನೆ ಮಾಡಬೇಕಾದ ಅಗತ್ಯವಿದೆ. ಸಾಧಾರಣವಾಗಿ ಶ್ವೇತಾಂಬರ ಪಂಥದ ವಿದ್ವಾಂಸರು. 'ತತ್ತ್ವಾರ್ಥ ಸೂತ್ರ'ವು ಮೌಲಿಕವಾಗಿ ಶ್ವೇತಾಂಬರ ಪಂಥದ್ದು, ದಿಗಂಬರ ಪಂಥದ್ದಲ್ಲ ಎಂಬ ವಾದವನ್ನು ಮುಂದಿಡುವಲ್ಲಿ ಕೊಡಲಾಗಿರುವ ಆಧಾರಗಳಲ್ಲಿ ಒಂದು ತತ್ತ್ವಾರ್ಥ ಸೂತ್ರದ 'ಮೂರ್ಛಾ ಪರಿಗ್ರಹಃ' ಸೂತ್ರವನ್ನು (೭/೧೭)

ಕುರಿತದ್ದಾಗಿದೆ. ಈ ಬಗ್ಗೆ ಪೂಜ್ಯ ಮುನಿ ನಥ್‌ಮಲ್ ಅವರು ಹೇಳಿರುವ ಮಾತನ್ನು ಇಲ್ಲಿ ಅನುವಾದಿಸಲಾಗುವುದು.

"ಶಯ್ಯಂಭವ ಸೂರಿಯವರು ದಶವೈಕಾಲಿಕದಲ್ಲಿ–'ವಸ್ತ್ರಗಳನ್ನಿಟ್ಟುಕೊಳ್ಳುವುದು ಪರಿಗ್ರಹವಲ್ಲ' ಎಂಬುದರ ಪುಷ್ಟಿಗಾಗಿ 'ಜ್ಞಾತಪುತ್ರ ಮಹಾವೀರನು, ಸಂಯಮ ಮತ್ತು ಲಜ್ಜಾನಿಮಿತ್ತವಾಗಿ ವಸ್ತ್ರವಿರಿಸಿಕೊಳ್ಳುವುದು ಪರಿಗ್ರಹವೆಂಬುದಾಗಿ ಹೇಳಿಲ್ಲ, ಎಂದು ಹೇಳಿ ಭಗವಂತನ ಅಭಿಮತವನ್ನು ಸಾಕ್ಷೀಕರಿಸಿದ್ದಾರೆ.[೨೯] (ದಶವೈಕಾಲಿಕ –೬/೨೦–೨೨) ಇದರಿಂದ ಅಂತರಿಕ ಮತಬೇದದ ಸೂಚನೆ ದೊರೆಯುವುದು. ಕೆಲವು ಶತಾಬ್ದಿಗಳ ಬಳಿಕ ಶಯ್ಯಂಭವರ 'ಮುಚ್ಛಾಪರಿಗ್ಗಹೋ ವುತ್ತೋ' ವಾಕ್ಯವು ಪರಿ ಗ್ರಹದ ಪರಿಬಾಷೆಯಗಿಬಿಟ್ಟಿದೆ. ಉಮಾಸ್ವಾತಿಯವರ 'ಪುರ್ಛಾ ಪರಿಗ್ರಹಃ' ಸೂತ್ರವು ಇದರ ಉಪ ಜೀವಿಯಾಗಿದೆ, (ಅರ್ಥಾತ್ ಇದರ ಆಧಾರದಿಂದಲೇ ನಿಬದ್ದವಗಿದೆ).

'ಮೂರ್ಛಾ'(ಮುಚ್ಛಾ) ಪದವು 'ಪರಿಗ್ರಹ' ಎಂಬ ಅರ್ಥದಲ್ಲಿ ಕುಂದಸ್ವಾಮಿಯವ ರಿಂದಲೂ ಮುಂದಿನಂತೆ ಪ್ರಯೋಗ ಹೊಂದಿದೆ.[೩೦] (೧) ಮುಚ್ಛಾರಂಭ ವಿಮುಕ್ಕಂ' (ಪ್ರ. ಸಾ. ೩/೬) (೨)'ಮುಚ್ಛಾ ಪರಿಗ್ಗಹೋಚ್ಚಿಯ ' (–ಪ್ರ. ಸಾ. ೩–೧೭–೨) (೩) ಮುಚ್ಛಾದಿ ಜಣಣ ರಹಿದಂ–(ಪ್ರ. ಸಾ. ೩/೨೩), (೪) ಪರಮಾಣುಪಮಾಣಂ ವಾಮುಚ್ಛಾ–ಪ್ರ.ಸಾ. ೩/೩೯)–ಈ ಎಲ್ಲೆಡೆಯಲ್ಲಿಯೂ 'ಮುಚ್ಛಾ' ಪದವು 'ಬಾಹ್ಯದ್ರವ್ಯದಲ್ಲಿ ಮಮತ್ವ ಬುದ್ಧಿ' ಎಂಬರ್ಥದಲ್ಲಿ ಪ್ರಯುಕ್ತವಾಗಿದೆ.[೩೧] ಮುನಿಗಳು ನಗ್ನತೆಗೆ ಅಪವಾದವಾಗಿ ವಸ್ತ್ರವನ್ನು ಧರಿಸುವುದರ ಬಗ್ಗೆ ಕುಂದಕುಂದಸ್ವಾಮಿಯವರು ಕಡು ವಿರೋಧ ವ್ಯಕ್ತಪಡಿಸಿರುವುದು ತಿಳಿದ ಸಂಗತಿಯಾಗಿದೆ ಆದ್ದರಿಂದ 'ತತ್ವಾರ್ಥ ಸೂತ್ರಕಾರರು ಮೂರ್ಛಾ' ಪದಪ್ರಯೋಗಪೂರ್ವಕ ಪರಿಗ್ರಹವನ್ನು ಸೂಚಿಸಿರುವುದ ರಲ್ಲಿ ಮುನಿಗಳಿಗೆ ವಸ್ತ್ರ ಹೊಂದಿರಲು ಅನುಮತಿ ಸೂಚಿಸಿದ್ದಾರೆ. ಎಂಬ ಅರ್ಥ ವಾಚನವು, ತಾವು ಅಂಗೀಕರಿಸಿರುವ ವಸ್ತ್ರಾಧಾರಣೆ ಆಚರಣೆಯ ಪೋಷಕವಾಗಿ, ಶ್ವೇತಾಂಬರ ಪಂಥದವರು ಮಾಡಿರುವ ಕಲ್ಪನೆಯ ಅರ್ಥವಾಗಿದೆ. ಇಲ್ಲಿ ಮತ್ತೂ ಒಂದು ಅಂಶವನ್ನು ಸ್ಪಷ್ಟಪಡಿಸಬೇಕಾಗಿದೆ.

ತತ್ವಾರ್ಥ ಸೂತ್ರದ 'ಮೂರ್ಛಾಪರಿಗ್ರಹ' ಸೂತ್ರವು, ಪೂಜ್ಯ ನಥ್‌ಮಲ್ ಮುನಿಯವರು ಹೇಳಿರುವಂತೆ, ದಶವೈಕಾಲಿಕದ 'ಮುಚ್ಛಾಪರಿಗ್ಗಹೋವುತ್ತೋ' ಎಂಬುದರ ಉಪಜೀವಿಯಾಗಿದ್ದಲ್ಲಿ

ಅದೇನೂ ಬಾಧಕವಾದ ಸಂಗತಿಯಲ್ಲ, ದಿಗಂಬರ ಜೈನ ಪಂಥದಲ್ಲಿ ಅಂಗಶ್ರುತ ಆಗಮ ಗ್ರಂಥಗಳು, ಪೂರ್ಣ ರೀತಿಯಿಂದಲ್ಲದಿದ್ದರೂ, ಭಾಗಶಃ ಏಕದೇಶರೂಪದಿಂದ ಮಹಾವೀರ ನಿರ್ವಾಣದಿಂದ ಏಳೆಂಟು ಶತಮಾನ ಪರ್ಯಾಂತ ಉಳಿದು ಬಂದಿದ್ದುವೆಂಬುದನ್ನು ಹಿಂದೆ ಸ್ಪಷ್ಟಪಡಿಸಿದೆ. ಹೀಗೆ ಉಳಿದು ಬಂದಿದ್ದ ಅಂಗಬಾಃಯ ಶ್ರುತದ ದಶವೈಕಾಲಿಕವೂ ಉಳಿದು ಬಂದಿದ್ದಿತೆಂಬುದಕ್ಕೆ ಆಧಾರವಿದೆ ದಶವೈಕಾಲಿಕದ ೬೨ನೇ ಗಾಹೆಯ ಉಲ್ಲೇಖ ಧವಲಾಟೀಕೆಯಲ್ಲಿದೆ.[೩೨] ಹೀಗೆಂದ ಮಾತ್ರಕ್ಕೆ ಈ ಗಾಹೆಯನ್ನು ಶ್ವೇತಾಂಬರ ಪಂಥದಲ್ಲಿ ಉಳಿದು ಬಂದಿರುವ ದಶವೈಕಾಲಿಕದಿಂದ ತೆಗೆದುಕೊಳ್ಳಲಾಗಿದೆ ಎಂದೇನಲ್ಲ. ದಿಂಗಬರ ಪಂಥದಲ್ಲಿಯೇ ಉಳಿದು ಬಂದಿದ್ದ ದಶವೈಕಾಲಿಕದಿಂದ ಉಲ್ಲೇಖಿಸಲಾಗಿದೆಯೆಂದು ಹೇಳಬಹುದಾಗಿದೆ. ಒಂದು ಕಾಲಕ್ಕೆ ಎಂದರೆ, ಶ್ರುತಕೇವಲಿ ಭದ್ರಬಾಹುಸ್ವಾಮಿಯವರ ಕಾಲ ಪರ್ಯಂತ ಅಂಗ ಶ್ರುತ ಮತ್ತು ಅಂಗಬಾಹ್ಯ ಶುತ್ರ ಆಗಮಗಳು ದಿಗಂಬರ ಮತ್ತು ಶ್ವೇತಾಂಬರ ಪಂಥಗಳೆರಡಕ್ಕೂ ಯಾವ ರೀತಿಯದಾದ ಮತಭೇದವೂ ಇಲ್ಲದಂತಹ ವುಗಳಾಗಿದ್ದುವು. ಹಿಂದೆ ಹೇಳಲಾಗಿರುವಂತೆ ಸ್ಥೂಲಭದ್ರಸ್ವಾಮಿಯವರ ಶಿಷ್ಯ ಸುಹಸ್ತಿಯವರಿಂದ ಆರಂಭವಾದ ಮುನಿಗಳ ವಸ್ತ್ರಖಂಡದ ಉಪಯೋಗವು ಕಾಲಾನು ಕ್ರಮದಲ್ಲಿ ವೃದ್ಧಿಹೊಂದಿದ್ದಲ್ಲದೆ ಪಾತ್ರಾದಿ ಪರಿಗ್ರಹಗಳನ್ನು ಹೊಂದಿರುವ ರೂಢಿಯೂ ಪ್ರಚಲಿತವಾಯಿತು. ಇದನ್ನು ಸಮರ್ಥಿಸಿಕೊಳ್ಳಲು ಗುರುಶಿಷ್ಯಾನು ಕ್ರಮದ ಸ್ಮೃತಿಯಲ್ಲಿ ಬರುತ್ತಿದ್ದ ಆಗಮಗಳಲ್ಲಿಯೂ ಹೊಸ ಹೊಸ ಅಂಶಗಳನ್ನು ಸೇರಿಸಿಕೊಳ್ಳಲಾಯಿತು. ಹೀಗೆ ಕಾಲಾನುಕ್ರಮದಲ್ಲಿ ಹೊಸ ಹೊಸ ಅಂಶಗಳನ್ನು ರೂಢಿಸಿಕೊಳ್ಳುತ್ತಾ ಬಂದ ಸ್ಥವಿರ ಕಲ್ಪ ಆಗಮಗಳು ಮತ್ತು ಹಿಂದೆ ಹೇಳಿರುವಂತೆ ಇದೇಶ್ವೇತಾಂಬರ ಪಂಥದ್ದಾಗಿದ್ದ ಜಿನಕಲ್ಪಿ ಆಗಮಗಳ ಮದ್ಯೆ ಪರಸ್ಪರ ಹೊಂದಾ ಣಿಕೆಯಿಲ್ಲದಂತಾಯಿತು. ವೀ. ನಿ. ಸಂವತ್ ೧೦೦೦ ವರ್ಷಗಳ ಆಸುಪಾಸಿನಲ್ಲಿ ದೇವರ್ಧಿಗಣಿಯವರು ಸ್ಥವಿರ ಕಲ್ಪ ಮುನಿಬಾಹುಳ್ಯದ ಸಭೆಯನ್ನು ಯೋಜಿಸಿ ಎರಡೂ ಪಂಥದ ಆಗಮ ಗ್ರಂಥಗಳಲ್ಲಿ ಪರಸ್ಪರ ಕಂಡು ಬರುತ್ತಿದ್ದ ವ್ಯತ್ಯಾಸಗಳನ್ನು ನಿವಾರಿಸಿ ಆಗಮಗ್ರಂಥಗಳಿಗೆ ಹೊಸ ರೂಪ ಕೊಟ್ಟರು. ದೇವರ್ಧಿಗಣಿಯವರ ಈ ಯೊಜನೆಯಲ್ಲಿ ವಸ್ತ್ರ ಪಾತ್ರಾದಿ ಉಪಯೋಗ ಮಾನ್ಯತೆಯ ಸ್ಥವಿರಕಲ್ಪ ಆಚಾರ ಸಮರ್ಥಕವಾದ ಅಂಶಗಳು ದಶವೈಕಾಲಿಕದಲ್ಲಿಯೂ ಸೇರಿಕೊಡಿವೆ ಎಂಬುದರಲ್ಲಿ ಸಂಶಯವಿಲ್ಲ. ದಿಗಂಬರ ಪಂಥದಲ್ಲಿ

ಉಳಿದುಬಂದಿದ್ದ ಆಗಮಗ್ರಂಥಗಳಲ್ಲಿ, ಮುನಿಗಳಲ್ಲಿ ವಸ್ತ್ರ ಪಾತ್ರಾದಿಗಳ ಉಪಯೋಗ ಸಮರ್ಥಕವಾದ ಅಂಶಗಳಿರಲಿಲ್ಲ ಮಹಾವೀರ ನಿರ್ವಾಣದಿಂದ ೭೦೦ ವರ್ಷಗಳ ಸಮಯದಲ್ಲಿ ದಿಗಂಬರ ಪಂಥದಲ್ಲಿ ಸ್ಮೃತಿರೂಪದಿಂದ ಉಪಲಬ್ಧವಿದ್ದ ಮೌಲಿಕ ದಶವೈಕಾಲಿಕದ 'ಮುಚ್ಛಾಪರಿಗ್ರಹೋ ವುತ್ತಂ' ಎಂಬ ಉಕ್ತಿಯುತತ್ತ್ವಾರ್ಥ ಸೂತ್ರದ 'ಮೂರ್ಛಾ ಪರಿಗ್ರಹಃ' ಸೂತ್ರಕೆ ಉಪಜೀವಿಯಾಗಿದ್ದಲ್ಲಿ ಅದು ಅಸಂಗತವೇನೂ ಅಲ್ಲ. ಹಿಂದೆ ಉಲ್ಲೇಖಿಸಿರುವಂತೆ, ಮಾನ್ಯ ಪಂ. ಸುಬಲಾಲ್ಜಿ ಸಂಘವಿ. ಅವರ 'ವಿಕ್ರಮ ಶಕೆ ಒಂದನೆ ಅಥವಾ ಎರಡನೆ ಶತಮಾನದವರೆಂದು ತಿಳಿಯಲಾಗಿರುವ ಕುಂದ ಕುಂದರ ಪ್ರಸಿದ್ಧ ಗ್ರಂಥಗಳೊಡನೆ ತತ್ತ್ವಾರ್ಥ ಸೂತ್ರದ ಯಾವ ಶಾಬ್ದಿಕಹಾಗೂ ವಸ್ತುಗತವಾದ ಮಹತ್ತ್ವ ಪೂರ್ಣವಾದ ಸಾದೃಶ್ಯವಿದೆಯೋ ಅದು ಅಕಸ್ಮಿಕವಾದುದೇನಲ್ಲ' ಎಂಬ ಅಭಿಮತವು ಮುಖ್ಯವಾಗಿ  ಎರಡು ಅಂಶಗಳನ್ನು ದೃಢಪಡಿಸುತ್ತದೆ. ಒಂದನೆಯದಾಗಿ ತತ್ತ್ವಾರ್ಥ ಸೂತ್ರದ ರಚನೆಯಲ್ಲಿ ಕುಂದಕುಂದಸ್ವಾಮಿಯವರ ಕೃತಿಗಳ ಪ್ರಭಾವದ ದೃಢೀಕರಣ ಮತ್ತು ಎರಡನೆಯದಾಗಿ ಕುಂದಕುಂದಸ್ವಾಮಿಯವರು ವಿಕ್ರಮ ಸಂ. ಒಂದು ಅಥವಾ ಎರಡನೇ ಶತಮಾನದವರಾಗಿರಬೇಕೆಂಬುದರ ದೃಢೀಕರಣ. ಮಾನ್ಯ ಪಂ. ಸುಖಲಾಲ್ ಜೀ ಸಂಘವಿ ಅವರು ಈ ರೀತಿಯಾಗಿ ತತ್ತ್ವಾರ್ಥ ಸೂತ್ರದ ರಚನೆಯಲ್ಲಿ ಕುಂದ ಕುಂದರ ಗ್ರಂಥಗಳ ಪ್ರಭಾವವನ್ನು ಒಪ್ಪಿಕೊಂಡಿರುವರಾದರೂ ತತ್ತ್ವಾರ್ಥಸೂತ್ರವು ಶ್ವೇತಾಂಬರ ಆಮ್ನಾಯದ್ದಾಗಿದೆ, ಸರ್ವಥಾ ದಿಂಗಬರ ಆಮ್ನಾಯದ್ದಲ್ಲ ಎಂಬ ವಾದ ವನ್ನು ಮಂಡಿಸುವ ಸಲುವಾಗಿ ಉಮಾಸ್ವಾತಯವರು ಶ್ವೇತಾಂಬರ ಪರಂಪರೆಯ

ವರು. ದಿಗಂಬರ ಪರಂಪರೆಯವರಲ್ಲ ಎಂದು ಹೇಳಿದ್ದಾರೆ.[೩೨] ಇಷ್ಟಲ್ಲದೆ, 'ಉಮಾ ಸ್ವಾತಿಯವರು ಕುಂದಕುಂದರ ಶಿಷ್ಯ' ಎಂಬ ದಿಗಂಬರ ಪಂಥದ ಮಾನ್ಯತೆ ಅಸತ್ಯ ಮತ್ತು ಉಮಾಸ್ವಾತಿಯವರ ಬಗ್ಗೆ ಅಥವಾ ಅವರಿಗೆ ಗೃದ್ಧ್ರ ಪಿಂಛ ಎಂಬ ಹೆಸರಿದ್ದಿ  ತೆಂಬ ದಿಗಂಬರ ಪಂಥದ ಐತಿಹ್ಯಕ್ಕೆ ಪ್ರಾಚೀನ ವಿಶ್ವಾಸಾರ್ಹ ಆಧಾರ ಕಂಡು ಬರುವುದಿಲ್ಲ ಎಂದುಹೇಳಿದ್ದಾರೆ.[೩೩] ಈ ಎಲ್ಲ ಮಂತವ್ಯಗಳನ್ನು ಕುರಿತು ದಿಗಂಬರ ಪಂಥದ ಅನೇಕ ವಿದ್ವಾಂಸರು ಪರ್ಯಾಲೋಚನೆ ಮಾಡಿ ತತ್ತ್ವಾರ್ಥ ಸೂತ್ರವು ದಿಗಂಬರ ಪಂಥದ್ದು ಎಂದು ಸಿದ್ಧಪಡಿಸಲು ಯತ್ನಿಸಿದ್ದಾರೆ. ಈ ವಾದ ವಿವಾದಗಳ  ಪರ್ಯಾಲೋಚನೆಗೆ ಇಲ್ಲಿ

ಅವಕಾಶವಿಲ್ಲ. ಆದರೆ ನಂದಿ ಆಮ್ನಾಯ ಪಟ್ಟಾವಲಿಯಲ್ಲಿ ತತ್ತ್ವಾರ್ಥ ಸೂತ್ರಕಾರ ಉಮಾಸ್ವಾತಿಯವರನ್ನು ಕುಂದಕುಂದಸ್ವಾಮಿಯವರ ಉತ್ತರಾಧಿಕಾರಿಯಾಗಿ ನಂದಿಸಂಘ ಮುನಿಗಣದ ಆಚಾರ್ಯ ಪಟ್ಟಧರರನ್ನಾಗಿ ಕಾಣಿಸಿದೆ. ಇಲ್ಲಿ ಉಮಾಸ್ವಾತಿಯವರ ಕಾಲವನ್ನು ಶಕ. ಸಂ. ೧೦೧ ಮತ್ತು ೧೪೨ ಮಧ್ಯವರ್ತಿ ಯಾಗಿ ಕಾಣಿಸಿದೆ. ಇದು ವಿ. ಕ್ರ. ಸಂ. ಗಣನೆ ೨೩೬ ಮತ್ತು ೨೭೭ ವರ್ಷಗಳ ಮಧ್ಯವರ್ತಿಕಾಲವಾಗುವುದು ಮತ್ತು ಇದು ಮಾನ್ಯ ಪಂ. ಸುಖಲಾಲಜಿ ಸಂಘವಿ ಯವರು ಹೇಳಿರುವ ಕಾಲಗಣನೆಯೊಡನೆ ಸಮನ್ವಿತವಾಗುವುದು. ತತ್ತ್ವಾರ್ಥ ಸೂತ್ರರಚನೆಯಲ್ಲಿ ಕುಂದಕುಂದರ ಗ್ರಂಥಗಳ ಪ್ರಭಾವವಿರುವುದು ಹಿಂದಿನ ವಿವರಣೆ ಯಿಂದ ಸ್ಪಷ್ಟವಾಗಿದೆ. ಆದ್ದರಿಂದ ನಂದಿ ಆಮ್ನಾಯ ಪಟ್ಟಾವಲಿಯಲ್ಲಿ ಕಾಣಿಸಿರು ವಂತೆ ಕುಂದಕುಂದಸ್ವಾಮಿಯವರು ಉಮಾಸ್ವಾತಿಗೃದ್ಧ್ರಪಿಂಛಾರ್ಯರಿಂದ ಮುಂಚಿತವಾಗಿ ನಂದಿಸಂಘ ಮುನಿಗಣದ ಆಚಾರ್ಯ ಪಟ್ಟಧರರಾಗಿದ್ದರೆಂಬುದು ಸಮರ್ಥಿತವಾಗುವುದಲ್ಲದೆ ಹಿಂದೆ ವಿವರಿಸಿರುವಂತೆ ಇವರು ಶಕ ಸಂ. ೪೯ ರಿಂದ ೧೦೧ರ (ವಿಕ್ರಮ ಸಂ ೧೮೪–೨೩೬ ಮಧ್ಯೆ ವೀ. ನಿ. ಸಂ. ೬೫೪ ಮತ್ತು ೭೦೭ ಮಧ್ಯೆ) ಮಧ್ಯಕಾಲದಲ್ಲಿ ಆಚಾರ್ಯಾಪಟ್ಟಸ್ಥರಾಗಿದ್ದರೆಂಬುದು ಸ್ಥಿರೀಕೃತವಾಗುವುದು.

ಕುಂದಕುಂದಸ್ವಾಮಿಯವರ ಕೃತಿಗಳು : ಕುಂದಕುಂದಸ್ವಾಮಿಯವರು, ಹಿಂದೆ ಸ್ಪಷ್ಟಪಡಿಸಿರುವಂತೆ, ಉಪಾಂತ್ಯ ಆಚಾರಾಂಗ ಶ್ರುತಧರ (ತೃ) ಭದ್ರಬಾಹುಸ್ವಾಮಿ ಯವರಿಂದ ಮುನಿದೀಕ್ಷೆ ಪಡೆದವರು. ಇವರ ಕಾಲದಲ್ಲಿ ಆಚಾರಾಂಗ ಶ್ರುತ ಹಾಗೂ ಇತರ ಎಲ್ಲ ಅಂಗಶ್ರುತ ಮತ್ತು ಪೂರ್ವ ಶ್ರುತ ಆಗಮದ ಏಕದೇಶಜ್ಞರಾಗಿದ್ದ ಮುನಿಗಳಿದ್ದರು. ಹಿಂದೆ ಹೇಳಿರುವಂತೆ (ತೃ) ಭದ್ರಬಾಹುಸ್ವಾಮಿಯವರ ಆದೇಶಾನು ಸಾರ ಅರ್ಹದ್ಬಲಿಸ್ವಾಮಿಯವರ ನೇತೃತ್ವದಲ್ಲಿ ಶ್ರವಣ ಬೆಳಗುಳದಿಂದ ದಮಿಳ ನಾಡಿನತ್ತ ಪಯಣ ಕೈಗೊಂಡ ಮುನಿಸಂಘದಲ್ಲಿ ಕಿರಿಯ ವಯಸ್ಸಿನ ಮಿನಿಯಾಗಿ ಕುಂದಕುಂದಸ್ವಾಮಿಯವರೂ ಸೇರಿದ್ದರು. ಇವರ ಮಧ್ಯೆ ಇದ್ದ ಕುಂದಕುಂದಸ್ವಾಮಿ ಯವರು ಪೂರ್ವ ಪರಂಪರೆಯಿಂದ ಉಳಿದು ಬಂದಿದ್ದಷ್ಟು ಅಂಗಶ್ರುತ ಮತ್ತು ಪೂರ್ವಶ್ರುತ ಆಗಮಗಳ ಅಧ್ಯಯನ ಮಾಡಿದ್ದಾರೆ. ಸ್ಮೃತಿ ರೂಪದಲ್ಲಿ ಉಳಿದು ಬಂದಿದ್ದ ಆಗಮಗಳನ್ನು ಲೊಪಿಬದ್ಧಗೊಳಿಸಿ ಪುಸ್ತಕರೂಪದಲ್ಲಿ ಉಳಿಸಿಕೊಳ್ಳುವಯತ್ನ ಇವರ ಕಾಲದಲ್ಲಿಯೇ ಆರಂಭಗೊಡಿದೆ.

ವಾಸ್ತವವೆಂದರೆ ನಾನಾ ದೃಷ್ಟಿಗಳಿಂದ ದಿಗಂಬರ ಪಂಥಕ್ಕೆ ಇದೊಂದು ಪರ್ವಕಾಲ : ನಿರ್ಗ್ರಂಥ ಮುನಿಗಳ ಸಂಘವು ದಿಗಂಬರ ಮತ್ತು ಶ್ವೇತಾಂಬರ ಎಂಬ ಎರಡು ಪಂಥಗಳ ರೂಪದಿಂದ ಹೋಳಾಗಿದ್ದಿತು. ಶ್ವೇತಂಬರ ಪಂಥದಲ್ಲಿ ಜಿನಕಲ್ಪಿ (ನಗ–ಅಚೇಲಕ) ಪಂಥಾದ್ದಾದ ಆಚಾರ ಧರ್ಮದ ಸಾಧುತ್ವವನ್ನು ಅಂಗೀಕರಿಸಲಾಗಿದ್ದಿತಾದರೂ ಸ್ಥವಿಕಲ್ಪಿ (ಸಚೇಲಕ) ಆಚಾರಧರ್ಮದ ಸಾಧುತ್ವವನ್ನು ಹೆಚ್ಚಿನದಾದ ರೀತಿಯಿಂದ ಪುರಸ್ಕರಿಸಲಾಗಿದ್ದಿತು. ಅದಾಗಲೇ ಪರಂಪರಾಗತವೆನಿಸಿದ್ದು ಸುಲಭ ಮಾರ್ಗೋಪಾಯವಾದುದಾಗಿದ್ದ ಸ್ಥವಿರಕಲ್ಪಿ ಪಂಥದತ್ತ ಮುನಿಗಳಿಗೆ ಹೆಚ್ಚಿನ ಒಲವು ಉಂಟಾಗಿದ್ದಲ್ಲಿ ಅದು ಆಶ್ಚರ್ಯ ಕಾರಿ ಅಲ್ಲ. ಇದಲ್ಲದೆ ಶ್ವೇತಾಂಬರ ಪಂಥದ (ಜಿನಕಲ್ಪಿ) ನಗ್ನಮುನಿಗಳ ಆಚಾರ ಧರ್ಮವೂ, ದಿಗಂಬರ ಪಂಥದ ಮುನಿಗಳ ಆಚಾರ ಧರ್ಮದ ಅಪೇಕ್ಷೆಯಿಂದ ಸುಲಭತರ ಮಾರ್ಗೋಪಾಯದ್ದಾಗಿದ್ದಿತು. ಇದರಿಂದ ನಿರ್ಗ್ರಂಥ ಧರ್ಮವು ನಗ್ನ ತೆಯ ಪ್ರಾಧನ್ಯತೆಯುಳ್ಳದ್ದು ಎಂಬ ಅಭಿಮತ ಹೊಂದಿದ್ದ ಮುನಿಗಳು, ಶ್ವೇತಾಂಬರ ಪಂಥಾನ್ವಿತ ಜಿನಕಲ್ಪಿ ಮಾರ್ಗವನ್ನು ಅಂಗೀಕರಿಸಿದರು. ಈ ಕಾರಣಗಳು ಮತ್ತು ಸನ್ನಿವೇಶವಾಗಿ ಮೂಡಿದ ಇತರ ಕಾರಣಗಳಿಂದಾಗಿ ದಿಗಂಬರ ಪಂಥದ ಮುನಿ ಸಮಾಜವು ಅತ್ಯಂತ ಅಲ್ಪಸಂಖ್ಯಾತವಾಯಿತು. ಈ ಅಲ್ಪಸಂಖ್ಯಾತರಾದ ಮುನಿಗಳಲ್ಲಿ ಎಲ್ಲರೂ ಪರಂಪರಾಗತವಾಗಿ ಉಳಿದು ಬಂದಿದ್ದ ಆಗಮದಲ್ಲಿ ಪ್ರಾವೀಣ್ಯತೆ ಹೊಂದಿದ್ದರೇನೆಂದಲ್ಲ. ಪ್ರಾವೀಣ್ಯತೆ ಹೊಂದಿದ್ದವರಲ್ಲಿಯೂ ಕೇವಲ ಕೆಲವರು ಮಾತ್ರ ಆಗಮವನ್ನು ಗ್ರಹಣ ಮಾಡಿ, ಧಾರಣಮಾಡಿ ಅದನ್ನು ಮುಂದಿನ ಪೀಳಿಗೆಗೆ ರಕ್ಷಿಸಿಡುವಂತಹ ಸಾಮರ್ಥ್ಯ ಹೊಂದಿದ ಮುನಿಗಳ ತೀವ್ರತರ ಅಭಾವವು ಆಗ ಇದ್ದಿತೆಂಬುವದನ್ನು ಪೂಜ್ಯ ಧರಸೇನಾಚಾರ್ಯರು ವೇಣಾತಟಾಕದ ಬಳಿ ವಿಹರಿಸಿದ್ದ ಮುನಿಸಂಘಕ್ಕೆ 'ಗ್ರಹಣ–ಧಾರಣ ಸಮರ್ಥರಾದ ಇಬ್ಬರು ಮುನಿಗಳನ್ನು ಕಳುಹಿಸಿ ಕೊ ' ಎಂದು ಪತ್ರ ಬರೆದಿದ್ದುದು ಅಭಿವ್ಯಕ್ತಿಗೊಳಿಸುತ್ತದೆ. ನಿರ್ಗ್ರಂಥ ಮೂಲ ಸಂಘದಿಂದ ಶ್ವೇತಾಂಬರ ಪಂಥವು ಸ್ವತಂತ್ರ ಸಂಘವಾಗಿ ಪ್ರತ್ಯೇಕಗೊಂಡ ಸನ್ನಿವೇಶ ದಲ್ಲಿ ದಿಗಂಬರ ಪಂಥದ ಮುನಿಗಳಿಗೆ ತಮ್ಮ ಮೂಲ ನಿರ್ಗ್ರಂಥ ಮುನಿ ಪರಂಪರೆ ಯಲ್ಲಿ ಉಳಿದುಬಂದಿದ್ದ ಆಗಮದ ಅವಶೇಷವನ್ನು, ಅದರಲ್ಲಿಯೂ ಪ್ರಾಥಮ್ಯತೆ ಯಿಂದ ಸೈದ್ಧಾಂತಿಕ ಆಧ್ಯಾತ್ಮಿಕ ಸಂಬಂಧಿ ಆಗಮವನ್ನು ಯಥಾಸಾಧ್ಯ ಉಳಿಸಿಕೊಳ ಬಾಕಾದ ಅಗತ್ಯವೇರ್ಪಟ್ಟಿತು. ಈ ಅಗತ್ಯದ ಪೂರೈಕೆಯ ಫಲಶ್ರುತಿಯಾಗಿ

ಈ ದಿನ  ನಮಗೆ ಷಟ್ಖಂಡಾಗಮ, ಕಸಾಯ ಪಾಹುಡ, ಇದರ ಟೀಕೆ ಯತಿವೃಷಭರ ಚೂರ್ಣಿಸೂತ್ರ, ಕುಂದಕುಂದಸ್ವಾಮೀಯವರ ಪಾಹುಡ ಸಂಗ್ರಹಗಳು, ವಟ್ಟಕೇರರ ಮೂಲಾ ಚಾರ, ಸಿವಜ್ಜರ ಮೂಲಾಧಾರನಾ (ಭಗವತೀ ಆರಾಧನಾ) ಮುಂತಾದ ಕೃತಿಗಳು ಉಳಿದುಬಂದಿವೆ. ಕುಂದಕುಂದಸ್ವಾಮೀಯವರು ೮೩ ಪಾಹುಡಗಳನ್ನು ರಚನೆ ಮಾಡಿದ್ದ ರೆಂಬ[೩೪] ಅನುಶ್ರುತಿಯಿದೆ. ಆದರೆ ಇವೆಲ್ಲವೂ ಈ ದಿನ ಉಳಿದುಬಂದಿಲ್ಲ. ಇವರ  ಕೃತಿಗಳೆನಿಸಿ ಈಗ, ಪಂಚಸ್ಥಿಕಾಯ ಪಾಹುಡ ಸಂಗ್ರಹ, ಪಯವಣಸಾರಪಾಹುಡ, ಸಮಯಸಾರಪಾಹುಡ, ನಿಯಮಸಾರಪಾಹುಡ, ಅಷ್ಟಪಾಹುಡ ಎಂಬ ಹೆಸರಿನಿಂದ ಸಂಕಲಿತವಾಗಿರುವ ಎಂಟು ಪಾಹುಡಗಳು, ಬಾರಸ ಅಣುವೆಕ್ಖ, ರಯಣಸಾರಪಾಹುಡ ಮತ್ತು ಪ್ರಾಕೃತ ದಶಭಕ್ತಿಪಾಠಗಳು ದೊರೆಯುತ್ತವೆ. ಇವರ ಕೃತಿಗಳನ್ನು 'ಆಗಮ' ಗಳೆಂದು ಬಹು ಹಿಂದಿನ ಕಾಲದಿಂದಲೂ ಮಾನ್ಯ ಮಾಡಲಾಗಿದೆ. ದೇವ ಅಕಲಂಕ ಸ್ವಾಮಿಯವರು ತಮ್ಮ ರಾಜವಾರ್ತಿಕದಲ್ಲಿ ಇವರ ಪಂಚಾಸ್ತಿಕಾಯವನ್ನು ಆಗಮಎಂದು ನಿರ್ದೇಶಿಸಿದ್ದಾರೆ. 'ಪಂಚಾಸ್ತಿಕಾಯೋಪದೇಶಾತ್ ಪಂಚೈವ ಅಸ್ತಿಕಾಯಾ ಆಗಮೇ ಉಪದಿಷ್ಟಾ' (೪\೧೫). ಅನಿತ್ಯ ಅಶರಣಾದಿ ಹನ್ನೆರಡು ಅನುಪೇಕ್ಷೆಗಳನ್ನು ನಿರೂಪಿಸುವ ಕೃತಿಗಳಲ್ಲಿ ಮೊದಲನೆಯದಾದ ಬಾರಸ ಅಣುವೆಕ್ಖದ ಅಂತಿಮ (೯೦)ನೇ ಗಾಹೆಯಲ್ಲಿ 'ಕುಂದಕುಂದ ಮುನಿನಾಥರಿಂದ ಹೇಳಲ್ಪಟ್ಟುದು' ಎಂದಿದೆ. ಇದರ ಐದು ಗಾಹೆಗಳನ್ನು ತತ್ತ್ವಾರ್ಥ ಸೂತ್ರದ ಪೂಜ್ಯಪಾದರ ಟೀಕೆ ಸರ್ವಾರ್ಥಸಿದ್ದಿಯಲ್ಲಿ ಉಲ್ಲೇಖಿಸಿರುವುದನ್ನು ಹಿಂದೆ ಹೇಳಿದೆ. ಈ ಕೃತಿಗಳಲ್ಲದೆ, ದರ್ಶನಪಾಹುಡ, ಸೂತ್ರ ಪಾಹುಡ, ಚಾರಿತ್ರಪಾಹುಡ, ಬೋಧಪಾಹುಡ, ಭಾವಪಾಹುಡ, ಮೋಕ್ಷಪಾಹುಡ, ಲಿಂಗಪಾಹುಡ ಮತ್ತು ಶೀಲಾಪಾಹುಡ ಎಂಬ ಎಂಟು ಪಾಹುಡಗಳ ಸಂಕಲನವನ್ನು ಅಷ್ಟಪಾಹುಡ ಎಂದು ಹೆಸರಿಸಲಾಗಿದೆ[೩೪]. ಇವುಗಳಲ್ಲಿ ಮೊದಲ ಆರು ಪಾಹುಡಗಳು ಶ್ರುತ ಸಾಗರಸೂರೀ ವಿರಚಿತ ಸಂಸ್ಕೃತ ಟೀಕೆಯೊಡನೆ 'ಛಪ್ಪಾಹುಡ'(ಆರು ಪಾಹುಡಗಳ ಸಂಕಲನ) ಎಂಬ ಹೆಸರನ್ನು ಹೊದಿವೆ. ಈ ಅಷ್ಟಪಾಹುಡಗ್ಳು ಕುಂದಕುಂದರ ರಚನೆಗಳಾಗಿಲ್ಲವೆಂಬುದಾಗಿ ಪಾಶ್ಚಿಮಾತ್ಯರಲ್ಲಿ ಕೆಲವರ ಮತ್ತು ಅವರನ್ನನುಸರಿಸಿದ ಭಾರತೀಯ ವಿದ್ವಾಂಸರಲ್ಲಿ ಕೆಲವರ ಅಭಿಪ್ರಾಯವಿರುವುದಾಗಿ ತಿಳಿದು ಬರುತ್ತದೆ.[೩೫]

ಆದರೆ ಈ ಅಭಿಪ್ರಾಯವು ಸತ್ಯನಿಷ್ಠವಲ್ಲವೆಂದು ಹೇಳಬಹುದಾಗಿದೆ. ಅಷ್ಟಪಾಹುಡ ಗಳಲ್ಲಿ ಒಂದಾದ ಮೋಕ್ಷಪಾಹುಡ ಕೆಲವು ಗಾಹೆಗಳ ಸಂಸ್ಕೃತಿಕರಣವನ್ನು ಹಾಗೂ ಮತ್ತೆ ಕೆಲವು ಗಾಹೆಗಳ ಛಾಯಾನುವಾದವನ್ನು ಪೂಜ್ಯಪದರ 'ಸಮಾಧಿತ್ಮತ್ರ'ದಲ್ಲಿ ಕಾಣಬಹುದು.[೩೬] ಇದರಿಂದ ಪಂಚಾಸ್ತಿಕಾಯ ಮುಂತಾದ ಕೃತಿಗಳಂತೆ ಅಷ್ಟಪಾಹುಡ ಗಳೂ ಪೂಜ್ಯಪಾದರ ಸಂಮುಖದಲ್ಲಿದ್ದುವೆಂದು ಸೂಚಿತವಾಗುವುದು. ಇದಲ್ಲದೆ ರಚನೆಯ ಶೈಲಿ ಮತ್ತು ಭಾಶಾ ಪ್ರಯೋಗಗಳ ಅಪೇಕ್ಷೆಯಿಂದಲೂ ಪಂಚಾಸ್ತಿ ಕಾಯಾದಿ ನಾಲ್ಕು ಪಾಹುಡಗಳ ಕರ್ತೃವಾದ ಕುಂದಕುಂದಸ್ವಾಮೀಯವರೇ ಅಷ್ಟ ಪಾಹುಡಗಳ ಕರ್ತೃವಾಗಿರುವರೆಂದು ಹೇಳಬಹುದಾಗಿದೆ. ಮಂಗಲ ಗಾಹೆಗಳು ಹಾಗೂ ಗ್ರಂಥ ರಚನಾ ನಿಮಿತ್ತದ ಉಕ್ತಿಗಳು ಮತ್ತು ಗ್ರಂಥಾಂತ್ಯದ ಉಕ್ತಿಗಳು ಸಾಧಾರಣ ವಾಗಿ ಒಂದೇ ತೆರನಾಗಿವೆ. ಪಂಚಾಸ್ತಿಕಾಯದಲ್ಲಿ ಅರಿಹಂತಜಿನರಿಗೆ ನಮಸ್ಕಾರ ಮಾಡಿ ಮುಂದಿನ ಗಾಹೆಯಲ್ಲಿ 'ಶ್ರಮಣ' ಮುಖೋದ್ಗತವಾದ ಈ ಸಮಯವನ್ನು ವೊಚ್ಛಾಮಿ– ಹೇಳಿರುವೆನು ಕೇಳಿ' ಎಂದು ಹೇಳಿದೆ. ಕೊನೆಯ ಗಾಹೆಯಲ್ಲಿ 'ಪ್ರವಚನ ಭಕ್ತಿಚೋದಿತನಾದ ನನ್ನಿಂದ ಮಾರ್ಗ ಪ್ರಭಾವನಾರ್ಥವಾಗಿ ಪ್ರವಚನದ ಸಾರವಾದ 'ಪಂಚತ್ಥಿಯ ಸಂಗಹಂ ಸುತ್ತಂ ಭಣಿಯಂ' ಎಂದು ಹೇಳಿದೆ. ಪ್ರವಚನಸಾರದಲ್ಲಿ ಮೊದಲು ವರ್ಧಮಾನ ತೀರ್ಥಂಕರರಿಗೆ ನಮಸ್ಕಾರ ಮಾಡಿ ಬಳಿಕ ಎಲ್ಲ ತೀರ್ಥಂ ಕರರು ಮತ್ತು ಪಂಚಪರಮೇಷ್ಠಿಗಳಿಗೆ ನಮಸ್ಕಾರ ಮಾಡಿ ಸಮ್ಯಗ್ದರ್ಶನ ಜ್ಞಾನ ಚಾರಿತ್ರ ಸ್ವರೂಪ ನಿರ್ದೇಶನದ ಪರೋಕ್ಷ ಸೂಚನೆಯ ಪೂರ್ವಕ ಪ್ರತಿಜ್ಞೆಯಿದೆ. ಅಂತ್ಯದಲ್ಲಿ (ಜಿನ) ಶಾಸನದ ಈ ಸರವನ್ನು ತಿಳಿದು ಸಾಗರ ಮತ್ತು ಅನಗಾರ ಚರಿಚ್ರಯುಕ್ತನಾದವನು ಬೇಗನೆ 'ಪ್ರವಚನ'ದ ಸಾರ(ಪರಮಾತ್ಮಭಾವ)ವನ್ನು ಹೊದುವನು ಎಂದು ಹೇಳಿದೆ. ಸಮಯಸಾರದಲ್ಲಿ, ಧ್ರುವವೂ ಅಚಲವೂ ಮತ್ತುಅನುಪಮವೂ ಆದ ಗತಿಯನ್ನು ಹೊಂದಿದ ಸಿದ್ಧರನ್ನು ನಮಸ್ಕರಿಸಿ ಶ್ರುತಕೇವಲಿ ಗಳಿಂದ ಹೇಳಲ್ಪಟ್ಟಿರುವ 'ಸಮಯಪಾಹುಡವನ್ನು' ವೊಚ್ಛಾಮಿ ಎಂದು ಪ್ರತಿಜ್ಞೆ ಮಾಡಿದೆ. ಅಂತ್ಯಗಾಹೆಯಲ್ಲಿ ಅರ್ಥ ಮತ್ತು ತತ್ತ್ವಗಳನ್ನು ತಿಳಿಯುವುದಕ್ಕಾಗಿ ಈ ಸಮಯ ಪಾಹುಡದ ಪಠಣ ಮಾಡಿ, ಜ್ಞಾನಸಂಪನ್ನನಾಗಿ ವಸ್ತು ಸ್ವಭಾವ ರೂಪದಲ್ಲಿ ತನ್ನನ್ನಿರಿಸಿಕೊಳ್ಳುವನು ಮತ್ತು ಉತ್ತಮ ಸುಖವನ್ನು ಹೊಂದುವನು ಎಂದು ಹೇಳಿದೆ. ನಿಯಮಸಾರದಲ್ಲಿ ವೀರ ಜಿನೇಂದ್ರನಿಗೆ ವಂದನೆ ಮಾಡಿ

ಕೇವಲಿ, ಶ್ರುತಕೇವಲಿಗಳು ಹೇಳಿರುವ 'ನಿಯಮಸಾರ'ವನ್ನು ವೊಚ್ಛಾಮಿ–ಹೇಳುವೆನು ಎಂದು ಪ್ರತಿಜ್ಞೆಮಾಡಿದೆ. ಅಂತ್ಯಗಾಹೆಯಲ್ಲಿ 'ಜಿನೋಪದೇಶವನ್ನು ತಿಳಿದು ನಿಜ (ಆತ್ಮ) ಭವನೆಯ ನಿಮಿತ್ತ ವಾಗಿ 'ನಿಯಮಸಾರ' ಎಂಬ ಹೆಸರಿನ ಶ್ರುತವು ನನ್ನಿಂದ ರಚಿಸಲ್ಪಟ್ಟದೆ' ಎಂದು ಹೇಳಿದೆ. 'ಬಾರಸ ಅಣುವೆಕ್ಖ'ದಲ್ಲಿ ಸರ್ವಸಿದ್ಧರಿಗೆ ನಮಸ್ಕರಿಸಿ ಹನ್ನೆರಡು ಅನುಪ್ರೇಕ್ಷೆ ಗಳನ್ನು 'ವೊಚ್ಛಂ' ಹೇಳುವೆನು ಎಂದು ಪ್ರತಿಜ್ಞೆಮಾಡಿದೆ. ಅಂತ್ಯದಲ್ಲಿ 'ಹೀಗೆ ನಿಶ್ಚಯ ವ್ಯವಹಾರ (ನಯಾಶ್ರಿತವಾಗಿ) ಕುಂದ ಕುಂದ ಮುನಿನಾಥನಿಂದ ಹೇಳಲ್ಪಟ್ಟಿದೆ. ಶುದ್ಧ, ಮನಸ್ಯನಾಗಿ ಭಾವಿಸುವವನು ಪರಮನಿರ್ವಾಣ ಹೊಂದುವನು' ಎಂದು ಹೇಳಿದೆ.

ಅಷ್ಟಪಾಹುಡದಲ್ಲಿ ಮೊದಲನೆಯದಾದ ದರ್ಶನಪಾಹುಡದ ಮಂಗಲಗಾಹೆಯಲ್ಲಿ ಜಿಣವರವಸಹ ವರ್ಧಮಾನನಿಗೆ ನಮಸ್ಕಾರ ಮಾಡಿ ದರ್ಶನ ಮಾರ್ಗವನ್ನು ಸಂಗ್ರಹ ವಾಗಿ ವೊಚ್ಛಾಮಿ–ಹೇಳುವೆನು ಎಂದು ಪ್ರತಿಜ್ಞೆ ಮಾಡಿ ಮುಂದೆ ೨೧ನೇ ಗಾಹೆಯಲ್ಲಿ 'ಈ ರೀತಿ ಜಿನರಿಂದ ಪ್ರರೂಪಿತವಾದ ಗುಣರತ್ನತ್ರಯದ ಸಾರವಾದ ಮೋಕ್ಷದ ಪ್ರಥಮ ಸೋಪಾನವಾದ 'ದರ್ಶನ' ರತ್ನವನ್ನು ಭಾವ ಸಹಿತ ಧರಿಸಿರಿ' ಎಂದು ಹೇಳಿದೆ. ಕೊನೆಯ ಗಾಹೆಯಲ್ಲಿ ಹನ್ನೆರಡು ಪ್ರಕಾರದ ತಪಸ್ಸುಳ್ಳವರಾಗಿ ಅನುತ್ತರ ವಾದ ನಿಏವಾಣವನ್ನು ಹೊಂದಿರುವರು ಎಂದು ಹೇಳಿದೆ. ಸುತ್ತಪಾಹುಡದ ಮೊದಲ ಗಾಹೆಯಲ್ಲಿ ಸೂತ್ರ (ಶ್ರುತ, ಆಗಮ)ವು, ಅರಹಂತರು ಹೇಳಿದ ಅರ್ಥವುಳ್ಳದು ಮತ್ತು ಗಣಧರರಿಂದ ಗ್ರಂಥ ರೂಪಹೊಂದಿದ್ದು ಎಂದು ಸುತ್ತದ ಲಕ್ಷಣ ಮತ್ತು ಮಹತ್ವ ವನ್ನು ಹೇಳಿ, ಎರಡನೇ ಗಾಹೆಯಲ್ಲಿ ಆಚಾರ್ಯಪರಂಪರೆಯ ಮಾರ್ಗದಿಂದ ಬಂದ (ದ್ರವ್ಯ ಮತ್ತು ಭವ ರೂಪದ) ಎರಡು ಪ್ರಕಾರದ ಸುತ್ತವನ್ನು ತಿಳಿದು ಭವ್ಯನು–ಶಿವ ಮುಕ್ತಿ ಮಾರ್ಗ ಹೊಂದಿದವರು ಸರ್ವದುಃಖ ನಿವೃತ್ತಿ ಹೊಂದಿರುವರು' ಎಂದು ಹೇಳಿದೆ. ಚಾರಿತ್ರ ಪಾಹುಡದಲ್ಲಿ ಆರಂಭಗಾಹೆಯಲ್ಲಿ ಅರಹಂತರಿಗೆ ವಂದನೆ ಮಾಡಿದೆ. ಎರಡನೆ ಗಾಹೆಯಲ್ಲಿ 'ಚಾರಿತ್ತಪಾಹುಡ'ವನ್ನು ವೊಚ್ಛೇ–ಹೇಳುವೆನೆಂದು ಪ್ರತಿಜ್ಞೆ ಮಾಡಿದೆ. ಕೊನೆಯ ಗಾಹೆಯಲ್ಲಿ ಸ್ಪಷ್ಟವಾಗಿ ಚರಣ ಪಾಹುಡವನ್ನು ರಚಿಸಿದೆ. ಎಂದು ಹೇಳಿ ಭಾವಶುದ್ಧಿಯಿಂದ ಭಾವಿಸುವವರು ಬೇಗನೆ ಅಪನುರ್ಭವ–ಪುನರ್ಜನ್ಮ ವಿಲ್ಲ ದವರಾಗುವರು (ಮುಕ್ತಿ ಹೊಂದುವರು) ಎಂದು ಹೇಳಿದೆ. ಬೋಧ ಪಾಹುಡದ ಮೊದಲಗಾಹೆಯಲ್ಲಿ

ಆಚಾರ್ಯರಿಗೆ ವಂದನೆ ಮಾಡಿ, ಎರಡನೆ ಗಾಹೆಯಲ್ಲಿ 'ಷಟ್‌ಕಾಯಗಳಿಗೆ ಸುಖಕರವಾದ, ಜಿನಮಾರ್ಗದಲ್ಲಿ ಜಿನೇಂದ್ರರಿಂದ ಹೇಗೆ ಹೇಳಲಾಗಿದೆಯೋ ಹಾಗೆ ಸಕಲ ಜನರ ಬೋಧನೆಯ ಅರ್ಥವನ್ನು ಸಂಗ್ರಹವಾಗಿ ವೊಚ್ಛಾಮಿ–ಹೇಳುವೆನು' ಎಂದು ಹೇಳಿದೆ. ಅರವತ್ತನೇ ಗಾಹೆಯಲ್ಲಿ '(ಆತ್ಮ) ಸ್ವರೂಪದ ಅರ್ಥ, ಶುದ್ಧಿಯ ಅರ್ಥವು ಜಿನಮಾರ್ಗದಲ್ಲಿ ಜಿನವರರು ಹೇಗೆ ಹೇಳಿರುವರೋ ಹಗೆ, ಷಟ್ಕಾಯಕ್ಕೆ ಸುಖಕರವಾದ ಭವ್ಯ ಜನರ ಭೋಧನೆಯ ಅರ್ಥವನ್ನು ಹೇಳಲಾಗಿದೆ' ಎಂದು ಹೇಳಿದೆ. ಈ ಪಾಹುಡಕ್ಕೆ 'ಛಕ್ಕಾಯ ಹಿಯಂಕರ' ಎಂಬುದು ರಚನಕಾರರ ಉದ್ದಿಷ್ಟ ಹೆಸರಾಗಿರಬೇಕೆಂದು ಅಭಿಪ್ರಾಯಪಡಲಾಗಿದೆ.[೩೭] ಭಾವಪಾಹುಡದ ಮೊದಲ ಗಾಹೆಯಲ್ಲಿ ಜಿನವರರಿಗೆ ಸಿದ್ಧರಿಗೆ ಮತ್ತು ಇತರ (ಆಚಾರ್ಯ ಉಪಾಧ್ಯಾಯ, ಸರ್ವಸಾಧು) ಸಂಯತರಿಗೆ ನಮಸ್ಕರಿಸಿ 'ಭಾವಪಾಹುಡ'ವನ್ನು ವೊಚ್ಛಾಮಿ –ಹೇಳುವೆನು ಎಂದು ಪ್ರತಿಜ್ಞೆ ಮಾಡಿದೆ. ಕೊನೆಯ ಗಾಹೆಯಲ್ಲಿ 'ಈ ಪ್ರಕಾರ ಸರ್ವ ವನ್ನೂ (ತಿಳಿದ) ಬುದ್ಧರಿಂದ ಉತ್ತಮವಾಗಿ ಕಾಣಿಸಿಲ್ಪಟ್ಟಿರುವ ಈ ಭಾವಪಾಹುಡ ವನ್ನು ಓದುವವನು, ಕೇಳುವವನು, ಭಾವಿಸುವವನು ಅವಿಚಲವಾದ ಸ್ಥಾನವನ್ನು ಹೊಂದುವನು' ಎಂದು ಹೇಳಿದೆ 'ಮೋಕ್ಷಪಾಹುಡದ ಮೊದಲ ಗಾಹೆಯಲ್ಲಿ ಕರ್ಮ ಕ್ಷಯ ಮಾಡಿ ಜ್ಞಾನಮಯನಾದ ಆತ್ಮ ಸ್ವರೂಪ ಹೊಂದಿದ ದೇವನಿಗೆ ನಮಸ್ಕಾರ ಹೇಳಿದೆ. ಎರಡನೇ ಗಾಹೆಯಲ್ಲಿ ಪುನಃ 'ಅನಂತ ವರಜ್ಞಾನ ದರ್ಶನ ಶುದ್ಧನಾದ ದೇವನಿಗೆ ನಮಸ್ಕಾರ ಮಾಡಿ, ಪರಮ ಯೊಗಿಗಳ ಪರಮಾತ್ಮರ ಪರಮಪಥ, (ಮೋಕ್ಷಮಾರ್ಗ)ವನ್ನು ವೊಚ್ಛ–ಹೇಳುವೆನು' ಎಂದು ಪ್ರತಿಜ್ಞೆ ಮಾಡಿದೆ. ಅಂತಿಮ ಗಾಹೆಯಲ್ಲಿ 'ಈ ರೀತಿಯಾಗಿ ಜಿನ ಪ್ರಣೀತವಾದ ಮೋಕ್ಷಪಾಹುಡವನ್ನು ಉತ್ತಮ ಭಕ್ತಿಯಿಂದ ಓದುವವನು, ಕೇಳುವವನು, ಭಾವಿಸುವವನು, ಶಾಶ್ವತ ಸುಖವನ್ನು ಹೊಂದುವನು ಎಂದು ಹೇಳಿದೆ. ಲಿಂಗಪಾಹುಡದ ಆರಂಭ ಗಾಹೆಯಲ್ಲಿ 'ಅರಹಂತರಿಗೆ ಹಾಗೂ ಸಿದ್ಧರಿಗೆ ನಮಸ್ಕಾರ ಮಾಡಿ ಶ್ರಮಣ 'ಲಿಂಗ ಪಾಹುಡ' ಶಾಶ್ತ್ರವನ್ನು ಸಂಗ್ರಹವಾಗಿ ವೊಚ್ಛಾಮಿ– ಹೇಳುವೆನು' ಎಂದು ಪ್ರತಿಜ್ಞೆ ಮಾಡಿದೆ. ಅಂತಿಮ ಗಾಹೆಯಲ್ಲಿ ಈ ಪ್ರಕಾರ ಬುದ್ಧರು ಉಪದೇಶಿಸಿರುವ ಈ ಲಿಂಗಪಾಹುಡದ ಧರ್ಮ ವನ್ನು ಕಷ್ಟ ಸಹಿಷ್ಣುವಾಗಿ ಪಾಲಿಸುವವನು ಉತ್ತಮಸ್ಥಾನ ಹೊಂದುವನು ಎಂದು ಹೇಳಿದೆ. ಶೀಲಪಾಹುಡದ ಮೊದಲ ಗಾಹೆಯಲ್ಲಿ 'ವಿಶಾಲ ನಯನಗಳುಳ್ಳವನೂ ಕೆಂಪು

ಕಮಲದಂತೆ ಕೋಮಲವೂ ಶಮಭಾವವನ್ನುಂಟುಮಾಡುವುವೂ ಆದ ಪಾದಗಳುಳ್ಳ ವೀರ(ಜಿನೇಂದ್ರ)ನನ್ನು (ಮನ, ವಚನ, ಕಾಯ) ತ್ರಿಪ್ರಕಾರದಿಂದ ನಮಸ್ಕರಿಸಿ ಶೀಲ ಗುಣಗಳನ್ನು ಶ್ರವಣ ಮಾಡಿಸುವೆನು. ಎಂದು ಹೇಳಿದೆ. ಮುವ್ವತ್ತೆಂಟನೇ ಗಾಹೆಯಲ್ಲಿ 'ಜಿನವಚನ ಸಾರವನ್ನು ಗ್ರಹಿಸಿದ, (ಇಂದ್ರಿಯ) ವಿಷಯಗಳಲ್ಲಿ ವಿರಕ್ತರಾದ, ತಪೋ ಧನರಾದ ಧೀರರು ಶೀಲವೆಂಬ ನೀರಿನಿಂದ ಸ್ನಾನ ಮಾಡಿ ಸಿದ್ಧಾಲಯ ಸುಖವನ್ನು ಹೊಂದುವರು ಎಂದು ಹೇಳಿದೆ. ಮುಂದೆ ಅಂತಿಮಗಾಹೆಯಲ್ಲಿ 'ಅರಹಂತರದಲ್ಲಿ ಶುಭಭಕ್ತಿಯು, ದರ್ಶನದಿಂದ ಸುವಿಶುದ್ಧವಾದುದು ಸಮ್ಯಕ್ತ್ವವು, ವಿಷಯ ವಿರಕ್ತಿಯು ಶೀಲವು ಜ್ಞಾನವನ್ನು ಇದರಿಂದ ಬೇರೆಯಾದುದನ್ನಾಗಿ ಹೇಗೆ ತಾನೆ ಹೇಳಲು ಸಾಧ್ಯ? ಎಂದು ಹೇಳಿದೆ.

ಪಂಚಾಸ್ತಿಕಾಯಾದಿ ನಾಲ್ಕು ಪಾಹುಡಗಳ ರಚನೆಯ ಶೈಲಿಯೊಡನೆ ಅಷ್ಟ ಪಾಹುಡಗಳ ರಚನಾ ಶೈಲಿಯು ಸಮಾನತರವಾಗಿರುವುದು ಮೇಲ್ಕಂಡ ವಿವರಣೆಯಿಂದ ಸ್ಪಷ್ಟವಾಗಿದೆ. ಇದಲ್ಲದೆ ಭಾಷಾಪ್ರಯೋಗ ದೃಷ್ಟಿಯಿಂದಲೂ ಸಮಾನತೆಯನ್ನು ಗುರುತಿಸಬಹುದು. ಇದೂ ಅಲ್ಲದೆ ತತ್ವಾರ್ಥ ಸೂತ್ರದ ಮೇಲೆ ಕುಂದಕುಂದರ ಕೃತಿಗಳ ಪ್ರಭವನ್ನು ಹಿಂದೆ ವಿವರಿಸಲಾಗಿದೆ. ಅಷ್ಟಪಾಹುಡಗಳಲ್ಲಿ ಕೆಲವು ಪಹುಡಗಳ ಗಾಹೆಗಳ ವಾಕ್ಯ ಭಾಗಗಳು ತತ್ವಾರ್ಥ ಸೂತ್ರದಲ್ಲಿ ಸಂಸ್ಕೃತ ಸೂತ್ರ ರೂಪಗಳಾಗಿ ಪರಿವರ್ತನೆ ಹೊಂದಿರುವುದನ್ನು ಉದಹರಿಸಿದೆ, ಅವಷ್ಟೇ ಅಲ್ಲದೆ ಇನ್ನೂ ಅನೇಕ ಉದಾಹರಣೆಗಳನ್ನೂ ಕಾಣಬಹುದು. ಈ ಎಲ್ಲ ಕಾರಣಗಳಿಂದ ಅಷ್ಟ ಪಾಹುಡಗಳು ಕುಂದಕುಂದರ ರಚನೆಗಳೇ ಆಗಿವೆಯೆಂದು ನಿಶ್ಚಿತವಾಗುವುದು. ರಯಣಸರವು ಕುಂದಕುಂದಸ್ವಾಮಿಯವರ ಕೃತಿಯಾಗಿದೆಯೇ ಎಂಬ ಪ್ರಶ್ನೇ ಇದೆ. ಇದರಲ್ಲಿ ಮೂಲತಃ ಇದರಲ್ಲದ, ಅನೇಕ ಗಾಹೆಗಳು ಪ್ರಕ್ಷಿಪ್ತ ರೂಪದಿಂದ ಕಾಲಾಂತರದಲ್ಲಿ ಸೇರಿರಬೇಕೆಂಬ ಅಭಿಪ್ರಾಯವಿದೆ.[೩೮] ಕುಂದಕುಂದಸ್ವಾಮಿಯವರ ಕೃತಿಯೆಂದು ಹೇಳ ಲಾಗಿರುವ ಮತ್ತೊಂದು ಕೃತಿ ಮೂಲಾಚಾರ.[೩೯] ಈ ಕೃತಿಯ ಟೀಕಾಕಾರರಾದ ವಸುನಂದಿ ಆಚಾರ್ಯರು ಕೃತಿಯ ಪ್ರತಿಯೊಂದು ಪರಿಚ್ಛೇದದ ಅಂತ್ಯದಲ್ಲಿ ಈ ಕೃತಿಯ ರಚನಕಾರರನ್ನು 'ವಟ್ಟಕೇರ ಆಚಾರ್ಯ'ರೆಂದು ಹೇಳಿದ್ದಾರೆ. ಆದರೆ ಕೃತಿಯ ಅಂತ್ಯದಲ್ಲಿ ಕುಂದಕುಂದಸ್ವಾಮಿ ವಿರಚಿತವೆಂದೂ ಹೇಳಿದ್ದರೆ[೪೦.] ಇದಲ್ಲದೆ ಈ ಕೃತಿಅಯ ಮತ್ತೊಬ್ಬ

ಟೀಕಾಕಾರರಾದ ಮೇಘಚಂದ್ರರು ಇದನ್ನು ಕುಂದಕುಂದಸ್ವಾಮಿ ವೀರಚಿತವೆಂದೇ ಹೇಳಿದ್ದಾರೆ. ಹೀಗೆ ಈ ಕೃತಿಯ ಕರ್ತೃವಿನ ಬಗ್ಗೆ ಮತಭೇದವಿದ್ದು ಅದು ಪರಿಹಾರವಾಗುವವರೆಗೆ ಇದನ್ನು ಕುಂದಕುಂದರ ಕೃತಿಗಳಲ್ಲಿ ಒಂದು ಎನಿಸಿ ಪರಿಗಣನೆ ಮಾಡಬೇಕಾಗಿದೆ. ಇಷ್ಟಲ್ಲದೆ 'ವಟ್ಟಕೇರ' ಎಂಬುದು ಕುಂದಕುಂದರಿಗೇ ಸಂದಿರುವ ವಿಶೇಷಣಾತ್ಮಕವಾದ ನಾಮ ನಿರ್ದೇಶನವಾಗಿರಬಹುದೆ ? ಎಂಬ ವಿಚಾರಕ್ಕೂ ಎಡೆಯಿದೆ. ಚತುರ್ದಶ ಪೂರ್ವದ ಪಾಹುಡಗಳು ಗದ್ಯಾತ್ಮಕ ಸೂತ್ರಗಳಾಗಿದ್ದುವೆಂದು ಹೇಳಬಹುದಾಗಿದೆ. ಷಟ್ಖಂಡಾಗಮದ ಸೂತ್ರಗಳು ಗದ್ಯಾತ್ಮಕವಾಗಿಯೇ ಇವೆ. ಹೀಗೆಯೇ 'ಜ್ಞಾನ ಪ್ರವಾದ' ಎಂಬ ಐದನೆಯ ಪೂರ್ವದ ಹತನೆ ವಸ್ತು ಅಧಿಕಾರದಲ್ಲಿ ಅಂತರ್ಗತವಾಗಿದ್ದ ಮೂರನ್ ೯ 'ಕಸಾಯ ಪಾಹುಡ'ವೂ ಗದ್ಯಾತ್ಮಕ ಸೂತ್ರರೂಪದಲ್ಲಿದ್ದು ಅದನ್ನು ಗುಣಧರಸ್ವಾಮಿಯವರು ಸಂಗ್ರಹಿಸಿ ಗಾಥಾ ಸೂತ್ರ ಗಳಾಗಿ ರಚಿಸಿದ್ದಾರೆ. ಈ ರೀತಿಯಿಂದ ಗದ್ಯಾತ್ಮಕ ಸೂತ್ರರೂಪದಲ್ಲಿದ್ದ ಅವಶಿಷ್ಟ ಪಾಹುಡಗಳನ್ನು ಕುಂದಕುಂದಸ್ವಾಮಿಯವರುಗಾಥಾ ರೂಪದ ವೃತ್ತಗಳಲ್ಲಿ ತಮ್ಮ ಕೃತಿಗಳಲ್ಲಿ ಸಂಗ್ರಹಿಸಿದ್ದಾರೆ. ಹೀಗೆ ಗದ್ಯಾತ್ಮಕವಾಗಿದ್ದ ಪಾಹುಡ ಸೂತ್ರಗಳೆಲ್ಲಕ್ಕೂ (ಗಾಥಾ) ವೃತ್ತರೂಪ ಕೊಟ್ಟು ತಮ್ಮ ಕೃತಿಗಳಲ್ಲಿ ಸಂಗ್ರಹಿಸಿದ ಕಾರಣದಿಂದ 'ವೃತ್ತ ಕಾರ' ಎನಿಸಿ ಪ್ರಾಕೃತದ 'ವಟ್ಟಕೇರ' ಎಂಬ ಪ್ರಶಸ್ತಿರೂಪದ ಅಥವಾ ವಿಶೇಷಣ ರೂಪದ ಅಭಿಧಾನ ಹೋಂದಿರಬಹುದೆಂದು ಹೇಳಬಹುದಾಗಿದೆ. ಆದರೆ ಕಾಲಾನುಕ್ರಮದಲ್ಲಿ ಈ ವಟ್ಟಕೇರ ಎಂಬುದು ಸ್ವತಂತ್ರವಾದ ಹೆಸರಾಗಿ ಉಳಿದುಬಂದಿದೆಯೆಂದು ಕಂಡು ಬರುತ್ತದೆ. ಈ ಪರ್ಯಾಲೋಚನೆಯ ಪ್ರಕಾರ 'ಪಟ್ಟಕೇರ' ಎಂಬ ವಿಶೇಷಣ ರೂಪದ ಹೆಸರು ಹೊಂದಿದ್ದ ಕುಂದಕುಂದರೇ 'ಮೂಲಾಚಾರ'ದ ಕರ್ತೃವಾಗಿರುವರೆಂದು ಹೇಳಬಹುದಾಗಿದೆ.

ವೀ. ನಿ. ಸಂ. ೬೮೩ರ ಪರಿಧಿಯಲ್ಲಿ ದ್ವಾದಶಾಂಗ ಚಟುರ್ದಶ ಪೂರ್ವಶ್ರುತದ ಅವಶಿಷ್ಟ ಭಾಗವನ್ನು, ವಿಶೇಷತಃ ಆಧ್ಯಾತ್ಮಿಕ–ಸೈದ್ಧಾಂತಿಕ ಸಂಬಂಧಿಯಾದ ಅವಶಿಷ್ಯ ಭಾಗವನ್ನು ಉಳಿಸಿಕೊಳ್ಳುವ ಯತ್ನ ನಡೆದದ್ದು ಈಗ ಸ್ಪಷ್ಟಗೊಂಡ ಸಂಗತಿಯಾಗಿದೆ. ಈ ಯತ್ನದ ಫಲವಾಗಿ ಮೂಡಿದ ಷಟ್ ಖಂಡಾಗಮವೇ ಮುಂತಾಂದ ಕೃತಿಗಳು ಯಾರೊಬ್ಬರ ಸ್ವತಂತ್ರ ರಚನೆಯ ಕೃತಿಗಳಾಗಿರದೆ ಭ. ಮಹಾವೀರನ ಕಾಲದಾರಭ್ಯ ಪರಂಪರಾಗತವಾಗಿ ಉಳಿದುಬಂದಿದ್ದ ಶ್ರುತದ

ಅವಶಿಷ್ಟ ವಸ್ತುವಿನ ಸಂಕಲನ ರೂಪದ ಕೃತಿಗಳಾಗಿವೆ. ಕುಂದಕುಂದಸ್ವಾಮಿಯವರೂ ಈ ಕಾಲದಲ್ಲಿಯೇ ಜೀವಿಸಿದ್ದು ತಮ್ಮ ಹಿರಿಯ ಗುರುಗಳಿಂದ ಅಂಗ–ಪೂರ್ವಶ್ರುತದ ಅವಶಿಷ್ಟ ಭಾಗದ ಉಪದೇಶ ಪಡೆದುಕೊಂಡಿದ್ದರೆಂಬುದನ್ನು ಹಿಂದೆ ಸ್ಪಷ್ಟಪಡಿಸಿದೆ. ಈ ಕಾಲದಲ್ಲಿ ಮೂಡಿದ ಇತರ ಕೃತಿಗಳಂತೆ ಕುಂದಕುಂದಸ್ವಾಮಿಯವರ ಹೆಸರಿನಲ್ಲಿರುವ ಕೃತಿಗಳೂ ಅವರ ಸ್ವತಂತ್ರ ರಚನೆಗಳಾಗಿರದೆ ಪರಂಪರಾಗತವಾಗಿ ಬಂದಿದ್ದ ಶ್ರುತದ ಅವ್ಶಿಷ್ಟ ಭಾಗಗಳ ಸಂಕಲನ ರೂಪದ ಕೃತಿಗಳಾಗಿವೆ. ಈ ಕಾರಣದಿಂದಾಗಿಯೇ ಕುಂದಸ್ವಾಮಿಯವರು 'ಪಂಚತ್ಥಿಕಾಯ ಪಾಹುಡ ಸಂಗಹ' ಮುಂತದ ಎಲ್ಲ ಕೃತಿಗಳಲ್ಲಿಯೂ ಪದೇ ಪದೇ 'ಜಿಣೇಕಹಿಯಂ, ಸುಕುಕೇವಲೀ ಭಣಿಯಂ' ಎಂದು ಮುಂತಾಗಿ ಹೇಳಿದ್ದಾರೆ. ಇದರಿಂದ ಕುಂದಕುಂದರ ಕೃತಿಗಳೆಲ್ಲವೂ, ಮಂಗಲ ಗಾಹೆಗಳ, ಪ್ರತಿಜ್ಞಾ ಗಾಹೆಗಳ, ವಸ್ತು ಮಹತ್ತ್ವ ಸೂಚಕವಾದ ಅಂತಿಮ ಗಾಹೆಗಳ ಹೊರತಾಗಿ ಮಿಕ್ಕೆಲ್ಲ ಗಾಹೆಗಳು ಪರಂಪರಾಗತವಾಗಿ ಬಂದಿದ್ದ ಅಂಗಶ್ರುತಗಾಹೆಗಳ ಸಂಕಲನಾತ್ಮಕವಾಗಿವೆ ಯೆಂದು ವ್ಯಕ್ತವಾಗುವುದು. ಡಾ. ಎ. ಎನ್. ಉಪಾಧ್ಯೆಯವರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ[೩೯]. ಕುಂದಕುಂದಸ್ವಾಮಿಯವರ ಕೃತಿಗಳಲ್ಲಿ ಕಂಡು ಬರುವ 'ವಸ್ತ್ರ ಧಾರಕನಾಗಿದ್ದು ತೀರ್ಥಂಕರನೂ ಸಿದ್ಧಿ ಪಡೆಯಲಾರನು' ಎಂದು ಮುಂತಾದ ಹೇಳಿಕೆ ಗಳ ಗಾಹೆಗಳು ಶ್ವೇತಾಂಬರ ಪಂಥದ ಮುನಿಗಳ ಸಚೇಲಕ ಆಚಾರ ವಿಧಿಯ ಅಸಾಧುತ್ವವನ್ನು ಕಾಣಿಸುವ ಉದ್ದೇಶದವುಗಳಾಗಿವೆಯೆಂದು ತಿಳಿಯಲಾಗಿದೆಯಾಗಿ ಈ ಗಾಹೆಗಳು ಕುಂದಕುಂದಸ್ವಾಮಿಯವರ ರಚನೆಗಳಾಗಿವೆ ಎಂದು ತಿಳಿಯಲಾಗಿದೆ. ಇಷ್ಟಾದರೂ ಈ ಗಾಹೆಗಳು ಪೂರ್ವ ಪರಂಪರೆಯಿಂದ ಬಂದಿದ್ದು ಅವುಗಳ ಸಂಕಲನ ಮಾಡಲಾಗಿದೆ ಎಂದು ಹೇಳಬಹುದಾಗಿದೆ.

ಭ. ಮಹಾವೀರನು ನಿರ್ಗ್ರಂಥಮುನಿದೀಕ್ಷೆ ಪಡೆಯುವ ಮುನ್ನವೇ ಭ. ಗೌತಮ ಬುದ್ದನು ತನ್ನ ತಪಸ್ವಿ ಜೀವನ ಕಾಲದಲ್ಲಿ ಕೆಲಸಮಯ ದಿಗಂಬರ ಮುನಿಯಾಗಿದ್ದು ಅನಂತರ ತನ್ನದೇ ಆದ ,ಅಧ್ಯಮ ಮಾರ್ಗವನ್ನನುಸರಿಸಿ ದಿಗಂಬರ ಮುನಿಧರ್ಮವನ್ನು ತ್ಯಜಿಸಿ ವಸ್ತ್ರಧರನಾಗಿ ತಪಸ್ಸು ಮಾಡಿ ಬೋಧಿ ಸಂಪನ್ನನಾಗಿ ತನ್ನ ಧರ್ಮ ಮಾರ್ಗವನ್ನು ಪ್ರತಿಷ್ಠಾಪಿಸಿದ ಸಂಗತಿ ತಿಳಿದ ಸಂಗತಿಯಾಗಿದೆ. ಭ. ಮಹಾವೀರನಿಂದ ನಿರ್ಗ್ರಂಥ ಧರ್ಮದ ಪುನಶ್ಚೇತನಗೊಳ್ಳುವ ಸಮಯಕ್ಕೆ ಬೌದ್ದಧರ್ಮವು ಪ್ರಭಾವ

ಯುತವಾಗಿ ಪ್ರತಿಷ್ಠಿತವಾಗಿದ್ದಿತು. ಈ ಸನ್ನೀವೇಶದಲ್ಲಿ ನಿರ್ಗ್ರಂಥ ದಿಗಂಬರ ಮುನಿ ಧರ್ಮವನ್ನು ಸಚೇತನಗೊಳಿಸಬೇಕಗಿದ್ದಿತಾಗಿ 'ವಸ್ತ್ರಧಾರಣೆ ಮಾಡಿಯೂ ಸಿದ್ಧಿ ಪಡೆಯಬಹುದೆಂಬ ಬೌದ್ಧ ಮತ್ತು ಇತರ ಅನೇಕ ಧರ್ಮಪಂಥಗಳನ್ನು ನಿರಾಕರಣೆ ಮಾಡುವುದರ ಪ್ರಸಂಗವಶವಾಗಿ ಭ. ಮಾಹಾವೀರನ ಉಪದೇಶ ಮೂಲದ ಆಗಮಗಳಲ್ಲಿ 'ವಸ್ತ್ರಧಾರಣೆ ಮಾಡಿಕೊಂಡಿರುವವರು ಎಂಥವರೇ ಆಗಿರಲಿ ಅವರಿಗೆ ಸಿದ್ಧಿ ದೊರೆಯುವುದಿಲ್ಲ' ಎಂಬರ್ಥದ ಹೇಳಿಕೆಗಳು ಸಮಾವಿಷ್ಟವಾದುವು. ಇಂತಹ ಗಾಹೆ ಗಳನ್ನು ಗಮನ ಸೆಳೆಯುವಂತೆ ಉದ್ಘೂತ ರೀತಿಯಿಂದ ಪ್ರಾಯಶಃ ಅದಾಗತಾನೆ ಉದಯಿಸಿದ್ದ ಶ್ವೇತಾಂಬರ ಪಂಥದ ಮುನಿಗಳ ವಸ್ತ್ರಧಾರಣೆಯ ಆಚಾರವು ಆಗಮ ವಿರೋಧವಾದುದೆಂಬುದರ ಸಾಕ್ಷೀಕರಣಾರ್ಥವಾಗಿ, ಕುಂದಕುಂದ ಸ್ವಾಮಿಯವರು ಸಂಕಲನ ಮಾಡಿರುವರೆಂದು ಹೇಳಬಹುದಾಗಿದೆ. ಸಾಧಾರಣವಾಗಿ ಕುಂದಕುಂದ ಸ್ವಾಮಿಯವರ ಕೃತಿಗಳೆಲ್ಲಕ್ಕೂ 'ಪಾಹುಡ' ಎಂಬ ಹೆಸರು ಸಂಕಲಿತವಾಗಿದೆ. ಉದಾಹರಣೆಯಾಗಿ ಸಮಯಸಾರ ಪಾಹುಡ, ದರ್ಶನ ಪಾಹುಡ, ಇತ್ಯಾದಿ.

ಚತುರ್ದಶ ಪೂರ್ವಗಳ ಸ್ವರೂಪಕಥನದಲ್ಲಿ ಪ್ರತಿಯೊಂದು ಪೂರ್ವವೂ 'ವಸ್ತು' ಎಂಬ ಹತ್ತು ಅಧಿಕಾರಗಳುಳ್ಳದ್ದಾಗಿದ್ದು ಪುನಃ ಪ್ರತಿಯೊಂದು ವಸ್ತುವೂ ಅನೇಕ 'ಪಾಹುಡ' ಎಂಬ ವಿಭಾಗಗಳುಳ್ಳದ್ದಾಗಿದ್ದುವೆಂಬುದನ್ನು ಹಿಂದೆ ವಿವರಿಸಿದೆ. ಕುಂದಕುಂದರ ಕೃತಿಗಳು, ಅವರ ಕಾಲದಲ್ಲಿ ಅವಶಿಷ್ಟವಾಗಿ ಉಳಿದು ಬಂದಿದ್ದ ಶ್ರುತದ ಅವಶಿಷ್ಟ ಭಾಗಗಳ–ಪಾಹುಡಗಳ ಸಂಕಲನಗಳಾಗಿವೆ. ಉದಾಹರಣೆಯಾಗಿ ಇವರ ಪಂಚತ್ಥಿಕಾಯ ಪಾಹುಡ ಸಂಗ್ರಹವು ಪಂಚಾಸ್ತಿಕಾಯ, ಷಡ್ ದ್ರವ್ಯ ಮತ್ತು ನವ ಪದಾರ್ಥಗಳನ್ನು ನಿರೂಪಿಸುತ್ತದೆ. 'ಹದಿನಾಲ್ಕು ಪೂರ್ವಗಳಲ್ಲಿ ಎರಡನೆಯದಾದ ಆಗ್ರಾಉಅಣೀಯ ಪೂರ್ವವು, ಅಂಗಗಳಲ್ಲಿ ಮುಖ್ಯವಾದ ಅರ್ಥವನ್ನು, ಎಂದರೆ ಪಂಚಾಸ್ತಿಕಾಯ, ಷಡ್ದ್ರವ್ಯ, ಸಪ್ತತತ್ತ್ವ ನವಪದಾರ್ಥಗಳನ್ನೂ ನಯಗಳನ್ನೂ ವರ್ಣಿ ಸುವುದು' ಎಂದುಹೇಳಿದೆ.[ಳಿ] ಇದೇ ಅಗ್ರಾಯಣೀಯ ಪೂರ್ವದ ಅಂಶವಾದ ಕಮ್ಮ ಪಯಡಿಪಾಹುಡವು ಷಟ್ಖಂಡಾಗಮದ ರೂಪಹೊಂದಿ ಉಳಿದು ಬಂದಿರುವುದೆಂಬು ದನ್ನು ಇಲ್ಲಿ ಗಮನಕ್ಕೆ ತಂದುಕೊಳ್ಳಬಹುದು. ಇದೇ ಆಗ್ರಾಯಣಿಯ ಪೂರ್ವದ ಮುಖ್ಯ ವಿಷಯವಾಗಿದ್ದ ಪಂಚಾಸ್ತಿಕಾಯಾದಿ ವಿಷಯಗಳನ್ನೂ ಕುಂದಕುಂದರು ತಮ್ಮ 'ಪಂಚಸ್ಥಿಕಾಯ ಪಾಹುಡ ಸಂಗಹ'ದಲ್ಲಿ ಸಂಕಲನ ಮಾಡಿರುವರೆಂದು ತಿಳಿಯ ಬಹುದಾಗಿದೆ. ಈ

ಪ್ರಕಾರವಾಗಿ ಚತುರ್ದಶ ಪೂರ್ವಶ್ರುತದ ಅವಶಿಷ್ಟ ಭಾಗಗಳ ಸಂಕಲನಗಳಾಗಿರುವ ಕುಂದಕುಂದ ಸ್ವಾಮೀಯವರ ಕೃತಿಗಳು ಜಿನೋಪದಿಷ್ಟ–ಗಣಧರ ಗ್ರಥಿತ ಆಗಮ ಭಾಗಗಳೇ ಆಗಿವೆ.

ಕುಂದಕುಂದ ಸ್ವಾಮಿಯವರ ರಚನೆಯೆಂದು ಪರಿಗಣನೆ ಮಾಡಲಾಗಿರುವ ಮತ್ತೂ ಒಂದು ಕೃತಿಯ ಬಗ್ಗೆ ಈಗ ಪರ್ಯಾಲೋಚನೆ ಮಾಡಬೇಕಾದ ಅಗತ್ಯವಿದೆ. ಈ ಕೃತಿ ತಮಿಳಿನ ಸುಪ್ರಸಿದ್ದ ತಿರುಕ್ಕುರಳ್, ಇದಕ್ಕೆ ತಮಿಳಿನ ವಾದವೆಂಬ ಮಾನ್ಯತೆಯಿದೆ. ಇದನ್ನು ವೈಷ್ಣವರು ತಮ್ಮ ಧರ್ಮಪಂಥದ್ದೆಂದು ಹೇಳಿಕೊಡಿರುವರಾದರೆ ಶೈವರು ತಮ್ಮ ಧರ್ಮಪಂಥದ್ದೆಂದು ಹೇಳಿಕೊಂಡಿದ್ದಾರೆ. ಇಷ್ಟು ಮಾತ್ರವಲ್ಲ, ಇದನ್ನು ಇಂಗ್ಲೀಷ್ ಗೆ ಭಾಷಾಂತರಿಸಿದ ರೆವೆರೆಂಡ್ ಪೋಪ್ ಅವರು ಇದರಲ್ಲಿ ಕ್ರಿಶ್ಚಿಯನ್ ಧರ್ಮದ ಪ್ರಭಾವವಿದೆಯೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜೈನ ಸಾಹಿತಿಗಳು ಈ ಕೃತಿಯನ್ನು ತಮ್ಮದೆಂಬುದಾಗಿ ಬಹಳ ಹಿಂದಿನ ಕಾಲದಿಂದಲೂ ಹೇಳಿಕೊಡು  ಬಂದಿರುವುದಕ್ಕೆ ಸ್ಪಷ್ಟ ಸಾಕ್ಷ್ಯಾಧಾರಗಳಿವೆ. ಇದರಲ್ಲಿ ಪ್ರತಿಪಾದಿತವಾಗಿರುವ ಧರ್ಮ, ಪ್ರಧಾನವಾಗಿ ಅಹಿಂಸಾಧರ್ಮ, ಇದರಲ್ಲಿ ಜೈನಧರ್ಮದ ಚಿಂತನೆಗಳೊಡನೆ ಐಕ್ಯತೆ ಹೊದಿರುವ ವಿಷಯಗಳನ್ನು ಎತ್ತಿ ಕಾಣಿಸಿ ಸನ್ಮಾನ್ಯ ದಿವಂಗತ ವಿದ್ಯಾ ಮಹೋದಧಿ ಪ್ರೊಫೆಸರ್ ಎ. ಚಕ್ರವರ್ತಿಯವರು ಇದು ಜೈನ ಧರ್ಮೀಯರ ಕೃತಿ ಎಂದು ಸ್ಪಷ್ಟಪಡಿಸಿದ್ದಾರೆ. ಇವರ ಅಭಿಮತದಂತೆ ಈ ಕೃತಿಯ ರಚನಾಕಾರರು ಏಲಾ ಚಾರ್ಯರು. ನಂದಿ ಆಮ್ನಾಯ ಪಟ್ಟಾವಲಿಯಲ್ಲಿ ಹೇಳಿರುವಂತೆ ಈ ಹೆಸರು ಕುಂದ ಕುಂದ ಸ್ವಾಮಿಯವರಿಗೆ ಸಂದಿರುವ ನಾಮಾಂತರಗಳಲ್ಲಿ ಒಂದಾಗಿದೆ. ಹೀಗೆಯೇ ಈ ನಾಮಾಂತರಗಳಲ್ಲಿ ಒಂದಾದ 'ಗೃದ್ಧ್ರಪಿಂಛ' ಎಂಬುದು ತತ್ವಾರ್ಥ ಸೂತ್ರ ಕರ್ತೃ ವಿನ ಹೆಸರಾಗಿದೆಯೆಂದು ಸ್ಥಿರಪಟ್ಟಿದೆ. ಇಂತಹ ಮತ್ತೊಂದು ಹೆಸರು'ವಕ್ರಗ್ರೀವ' ಶ್ರವಣಬೆಳಗುಳದ ಚಿಕ್ಕ ಬೆಟ್ಟದ ಮೇಗಣ ಪಾರ್ಶ್ವನಾಥಸ್ವಾಮಿ ಬಸದಿಯಲ್ಲಿರುವ ಮಲ್ಲಿಷೇಣ ಪ್ರಶಸ್ತಿ ಶಾಸನದಲ್ಲಿ (ಸಋಳ\೬೭) ಮೊದಲಿಗೆ ಕುಂದಕುಂದ ಸ್ವಾಮಿ ಯವರನ್ನು ಹೆಸರಿಸಿ ಬಳಿಕ ಸಮಂತಭದ್ರರನ್ನು ಅವರ ಬಳಿಕ ಸಿಂಹನಂದಿಯವರನ್ನು ಹೆಸರಿಸಿ ಆ ಬಳಿಕ 'ವಕ್ರಗ್ರೀವ'ರನ್ನು ಹೆಸರಿಸಿ ಇವರು ಆರುತಿಂಗಳಕಾಲ 'ಅಥ' ಶಬ್ದದ ವ್ಯಾಖ್ಯಾನ ಮಾಡಿದರೆಂದು ಹೇಳಿದೆ. ಈರೀತಿಯಾಗಿ ಇವರನ್ನು ಕುಂದಕುಂದ ಸ್ವಾಮಿಯವರ ಬಳಿಕ ಮೂರನೇ ಆಚಾರ್ಯರನ್ನಾಗಿ ಹೆಸರಿಸಿರುವುದರಿಂದ ಇವರು ಕುಂದಕುಂದರಿಂದ ಅನ್ಯರಾದ ಆಚಾರ್ಯರೊಬ್ಬರಾಗಿರುವರೆಂದು

ಸೂಚಿತವಾಗುವುದು. ಇನ್ನು 'ಏಲಾಚಾರ್ಯ' ಎಂಬ ಹೆಸರು; ಜೈನ ಆಗಮದ ಸಂರಕ್ಷಣೆ ಮತ್ತು ಪ್ರಸಾರಣದ ಪ್ರಕ್ರಿಯೆಯಲ್ಲಿ ವಿಶಿಷ್ಟ ರೀತಿಯದಾದ ಕಾರ್ಯಭಾಗಗಳಲ್ಲಿ ಪರಿಣತಿ ಹೊಂದಿದ್ದವರನ್ನು ಅಂತಹ ಕಾರ್ಯ ಪ್ರಾವೀಣ್ಯತೆಯನ್ನು ಸೂಚಿಸುವ ಪ್ರಶಸ್ತಿ ರೂಪದ ಹೆಸರುಗಳಿಂದ ನಿರ್ದೇಶಿಸುವ ರೂಢಿಯಿದ್ದಿತೆಂದು ಕಂಡುಬರುತ್ತದೆ. 'ವಾಚ ಕಾಚಾರ್ಯ' 'ಉಚ್ಚಾರಣಾಚಾರ್ಯ' ಎಂದು ಮುಂತಾದವು ಇಂತಹ ಪ್ರಶಸ್ತಿ ರೂಪದ ಹೆಸರುಗಳಾಗಿವೆ. ಏಲಾಚಾರ್ಯ ಎಂಬುದೂ ಇಂತಹುದೇ ಆದ ಅಪಾರ ಗೌರವ ಪ್ರಶಸ್ತಿ ರೂಪದ ಹೆಸರಾಗಿದ್ದಿತೆಂದು ಕಂಡುಬರುತ್ತದೆ. ಷಟ್ಖಂಡಾಗಮದ ಸುಪ್ರಸಿದ್ದ ಟೀಕಾಕಾರರಾದ ವೀರಸೇನಾಚಾರ್ಯರು ತಮ್ಮನ್ನು'ಏಲಾಯಿರಿಯ ಸೀಸೋಹಂ'ಎಂದು ಅಪಾರ ಹೆಮ್ಮೆಯಿಂದ ಭಕ್ತಿಯೊಡನೆ ಹೇಳಿಕೊಡಿದ್ದಾರೆ. ಈ  ರೀತಿಯ ಅಪಾರ ಗೌರವಪ್ರದವಾದ 'ಏಲಾಯಿರಿಯ' ಎಂಬ ಪ್ರಶಸ್ತಿರೂಪದ ಹೆಸರಿನಿಂದ ಕುಂದಕುಂದ ಸ್ವಾಮೀಯವರನ್ನು ಅವರ ಶಿಷ್ಯ ಸಂತತಿಯಿಗೌರವಿಸಿ ದ್ದಲ್ಲಿ ಅದು ಅಚ್ಚರಿ ಪಡುವಂತಹುದೇನಲ್ಲಳಙ. ಪರಂಪರಾಗತ ಹೇಳಿಕೆಯಂತೆ ಏಲಾಚಾರ್ಯ ಕುಂದಕುಂದರು 'ತಿರುಕ್ಕುರಳ್'ನ ರಚನಾಕಾರರು.ಇವರು ತಮ್ಮ ಶ್ರಾವಕ ಶಿಷ್ಯ ತಿರುವಲ್ಲುವರನಿಗೆ ಕೊಟ್ಟರು. ಅವನು ಮಧುರೈ ಸಂಗಂ ಸಮ್ಮುಖದಲ್ಲಿರಿಸಿ ಅದಕ್ಕೆ(ಉತ್ತಮಕಾವ್ಯದ) ಮಾನ್ಯತೆ ಪಡೆದನು.ಏಲಾಚಾರ್ಯರು ತಮಿಳು ನಾಡಿನ ನಾರ್ತ್ ಆರ್ಕಾಟ್ ಜಿಲ್ಲೆಗೆ ಸೇರಿರುವ ವಂದಿವಾಶ್ ಬಳಿಯಿರುವ ಬೆಟ್ಟದ (ಪೊನ್ನು ಮಲೈ) ಮೇಲೆ ತಪೋನಿರತರಾಗಿದ್ದು ತಮ್ಮ ಕೊನೆಯದಿನಗಳನ್ನು ಕಳೆದರು. ಇವರ ಪಾದ ಚಿಹ್ನೆಗಳನ್ನು ಇಂದಿಗೂ ಭಕ್ತರು ಭಕ್ತ್ಯಾದರಪೂರ್ವಕ ಪೂಜಿಸುವರು.[ಳಳ] (ತೃ) ಭದ್ರಬಾಹುಸ್ವಾಮೀಯವರ ಅನಂತರದಲ್ಲಿ ಆಚಾರ್ಯಪಟ್ಟಸ್ಥರಾದ ಅರ್ಹದ್ಬಲಿ ಸ್ವಾಮಿಯವರು ಸಮಸ್ತ ಮುನಿಸಂಘದೊಡನೆ ಶ್ರವಣಬೆಳಗುಳದಿಂದ ದಮಿಳ (ತಮಿಳ) ನಾಡಿಗೆ ಪಯಣಕ್ಕೈಗೊಂಡ ಇತಿವೃತ್ತವನ್ನು ಹಿಂದೆ ಸ್ಪಷ್ಟಪಡಿಸಿದೆ. ಈ ಮುನಿಸಂಘದಲ್ಲಿ ಆಗ ಆದಿನ್ನೂ ಕಿರಿಯ ವಯಸ್ಕರಾಗಿದ್ದ ಕುಂದಕುಂದಸ್ವಾಮಿ ಯವರೂ ಸೇರಿದ್ದರೆಂಬುದನ್ನು ಹಿಂದೆ ಸ್ಪಷ್ಟಪಸಿದೆ. ಈ ಸಂಧರ್ಭದಲ್ಲಿ ತಮಿಳು ನಾಡಿನಲ್ಲಿ ವಿಹಾರ ಮಾಡಿದ ಕುಂದಕುಂದಸ್ವಾಮಿಯವರು ಪ್ರಾಕೃತ ಭಾಷೆಯಂತೆ ತಮಿಳು ಭಾಷೆಯಲ್ಲಿಯೂ ಪ್ರೌಢಿಮೆ ಹೊಂದಿದ ಕುಂದಕುಂದ ಸ್ವಾಮಿ ಯವರು ತಿರುಕ್ಕುರಳ್ ಅನ್ನೂ ರಚಿಸಿರುವ ಸಂಭಾವ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.